ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 16-02-1996.

# *ಡೈಮಂಡ್ ಜೂಬ್ಲಿ (ವಜ್ರಮಹೋತ್ಸವ) ವರ್ಷದಲ್ಲಿ ವಿಶೇಷವಾಗಿ ಗಮನವಿಟ್ಟು ಸಮಯ ಹಾಗೂ ಸಂಕಲ್ಪದ ಖಜಾನೆಯನ್ನು ಜಮಾ ಮಾಡಿಕೊಳ್ಳಿರಿ.*

(डायमण्ड जुबली वर्ष में विशेष अटेन्शन देकर समय और संकल्प के खज़ाने को जमा करो)

**ಇಂದು ತ್ರಿಮೂರ್ತಿ ರಚನೆಕಾರರಾದ ಶಿವತಂದೆಯು ಮಕ್ಕಳಿಗೆ ಮೂರು ಶುಭಾಶಯಗಳನ್ನು ಕೊಡುತ್ತಾ ಇದ್ದಾರೆ.**

ಮಕ್ಕಳು ತಂದೆಗೆ ಧನ್ಯವಾದಗಳನ್ನು ನೀಡಲು ಬಂದಿದ್ದೀರಿ. ತಂದೆಯು ಇದಕ್ಕೆ ಪ್ರತಿಯಾಗಿ ಮೂರು ಶುಭಾಶಯಗಳನ್ನು ನೀಡುತ್ತಾ ಇದ್ದಾರೆ. ಒಂದು ಶಿವಜಯಂತಿಯ ಶುಭಾಶಯವಾಗಿದೆ. ಎರಡನೆಯದು ಡೈಮಂಡ್ ಜೂಬ್ಲಿಯ ಶುಭಾಶಯ ಹಾಗೂ ಮೂರನೆಯದು ವರ್ತಮಾನ ಸಮಯದಲ್ಲಿ ಉತ್ಸಾಹ-ಉಲ್ಲಾಸದಿಂದ ಸೇವೆ ಮಾಡುವ ಸಲುವಾಗಿ ಶುಭಾಶಯಗಳಾಗಿವೆ. ಹೀಗೆ ಮೂರು ಶುಭಾಶಯಗಳನ್ನು ನಾಲ್ಕೂ ಕಡೆಯ ಮಕ್ಕಳಿಗೆ ಬಾಪ್‌ದಾದಾರವರು ಕೊಡುತ್ತಿದ್ದಾರೆ. ತಂದೆಯ ಬಳಿ ಸರ್ವರ ಹೃದಯದ ಅಕ್ಕರೆ ಉತ್ಸಾಹದ ಸೇವೆಯ ಸಮಾಚಾರವು ತಲುಪಿದೆ ಈ ಲೌಕಿಕ ಜಯಂತಿ ಇಡೀ ಕಲ್ಪದಲ್ಲಿ ಇನ್ಯಾವಾಗಲೂ ಆಗುವುದಿಲ್ಲ ಏಕೆಂದರೆ ಇಡೀ ಕಲ್ಪದಲ್ಲಿ ದೇವಾತ್ಮರಾದರೂ, ಮಹಾತ್ಮರಾದರೂ, ಸಾಧಾರಣತ್ಮರೂ ಆಗಲಿ ಆತ್ಮರು ಆತ್ಮದ ಜಯಂತಿಯನ್ನು ಆಚರಿಸಿಕೊಳ್ಳುತ್ತಾರೆ ಆದರೆ ಈ ಸಂಗಮ ಯುಗದಲ್ಲಿ ಶ್ರೇಷ್ಠಾತ್ಮರಾದ ನೀವು ಯಾರ ಜಯಂತಿಯನ್ನು ಆಚರಿಸಲು ಬಂದಿದ್ದೀರಿ? ಪರಮಾತ್ಮನ ಜಯಂತಿಯನ್ನು ಹಾಗೂ ಪರಮ ಆತ್ಮ ತಂದೆಯು ಮಕ್ಕಳ ಜಯಂತಿಯನ್ನು ಆಚರಿಸುತ್ತಾರೆ. ಸತ್ಯಯುಗ, ತ್ರೇತಾದಲ್ಲಿಯೂ ಪರಮಾತ್ಮನು ನಿಮ್ಮ ಜಯಂತಿಯನ್ನು ಆಚರಿಸುವುದಿಲ್ಲ ಅಥವಾ ನೀವು ಪರಮಾತ್ಮನ ಜಯಂತಿಯನ್ನು ಆಚರಿಸುವುದಿಲ್ಲ. ಆದ್ದರಿಂದ ಎಷ್ಟು ಪದಮ-ಪದಮ ಪದಮದಷ್ಟು ಭಾಗ್ಯವಂತ ಆತ್ಮರಾಗಿದ್ದೀರಿ. ಎಂದಾದರೂ ನಿಮ್ಮ ಇಂತಹ ಶ್ರೇಷ್ಠ ಭಾಗ್ಯವನ್ನು ನೀವು ಸ್ವಪ್ನದಲ್ಲಾದರೂ ಯೋಚಿಸಿದ್ದೀರೇ? ಯೋಚಿಸಿರಲಿಲ್ಲವೇ? ಆದರೆ ಇಂದು ಸಾಕಾರ ರೂಪದಲ್ಲಿ ಅದನ್ನು ಆಚರಿಸುತ್ತಿದ್ದೀರಿ. ಆದ್ದರಿಂದ ಖುಷಿಯಿದೆಯಲ್ಲವೇ? ತುಂಬಾ ಖುಷಿಯಿದೆಯೇ? ನೋಡಿರಿ ಈ ದೇಶದವರಾಗಿರಲಿ ಅಥವಾ ವಿದೇಶದವರಾಗಿರಲಿ, ಯಾರು ಯಾರು ಈ ತಂಡದಲ್ಲಿ ಕುಳಿತುಕೊಂಡಿದ್ದೀರಿ ಮಧುಬನದವರಾಗಿರಲಿ ಅಥವಾ ಯಾರೇ ಆಗಿರಲಿ, ಇಂದಿನ ದಿವಸ ಬಂದಿದ್ದೀರಿ ಕುಳಿತುಕೊಂಡಿದ್ದೀರಿ. ಆದ್ದರಿಂದ ಎಷ್ಟು ಅದೃಷ್ಟವಂತರಾಗಿದ್ದೀರಿ. ಅದೃಷ್ಟವಂತರಾಗಿದ್ದೀರಲ್ಲವೇ? ಹಾಗಾದರೆ ಅಂತರ್ಯದಲ್ಲಿ ಏನು ಗೀತೆಯನ್ನು ಹಾಡುತ್ತೀರಿ? "ವಾಹ್ ಮೇರಾ(ನನ್ನ) ಭಾಗ್ಯ" ಹಾಗೂ ತಂದೆಯೂ ಏನು ಗೀತೆಯನ್ನು ಹಾಡುತ್ತಾರೆಂದರೆ "ವಾಹ್ ಮಕ್ಕಳ ಭಾಗ್ಯವೇ" (ವಾಹ್ ಬಚ್ಚೊಂಕೆ ಭಾಗ್ಯ)

ಎಂದು. ವಿಶೇಷವಾಗಿ ಸೇವೆಯ ತಂಡದವರು ಕುಳಿತಿದ್ದಾರಲ್ಲವೇ. ಎಲ್ಲಾ ಕಡೆಗಳ ವಿಶೇಷ ಆತ್ಮರಿದ್ದಾರಲ್ಲವೇ. ವಿಶೇಷ ಸೇವೆಯ ವಿಶೇಷ ಪ್ರತ್ಯಕ್ಷ ಫಲವನ್ನು ಪ್ರಾಪ್ತಿ ಮಾಡಿಕೊಳ್ಳುವ ಆತ್ಮರಾಗಿದ್ದೀರಿ. ಆದ್ದರಿಂದ ತಂದೆಯೂ ಸಹ ಇಂತಹ ಶ್ರೇಷ್ಠ ಮಕ್ಕಳನ್ನು ನೋಡಿ ಹರ್ಷಿತರಾಗುತ್ತಾರೆ. ಮಕ್ಕಳು ಹೆಚ್ಚು ಹರ್ಷಿತರಾಗುತ್ತೀರೋ ಅಥವಾ ತಂದೆಯು ಹೆಚ್ಚು ಹರ್ಷಿತರಾಗುತ್ತಾರೋ ಇಬ್ಬರೂ ಆಗುತ್ತೇವೋ ಅಥವಾ ತಂದೆಯು ಹೆಚ್ಚು ಹರ್ಷಿತರಾಗುತ್ತಾರೋ? ನೀವು ಹೆಚ್ಚು ಹರ್ಷಿತರಾಗುತ್ತೀರಾ, ಒಳ್ಳೆಯದು.

ಇಂದು ಬಾಪ್‌ದಾದಾರವರು ನಾಲ್ಕೂ ಕಡೆಯ ಸೇವಾಧಾರೀ ಡೈಮಂಡ್‌ಗಳ ಮಾಲೆಯನ್ನು ನೋಡುತ್ತಾ ಇದ್ದಾರೆ. ಮಾಲೆಯಲ್ಲಿ ಇದ್ದೀರಲ್ಲವೇ? ತಂದೆಯ ಕೊರಳಿನಲ್ಲಿ ಡೈಮಂಡ್ ಆಗಿ ಪ್ರಕಾಶಿಸುವ ಮಾಲೆಯ ಮಣಿಯಾಗಿದ್ದೀರೋ ಅಥವಾ ಅವರು ಬೇರೆ ಯಾರೋ ಇದ್ದಾರೆಯೇ? ನೀವೇ ಆಗಿದ್ದೀರಾ? ನೀವೇ ಆಗಿದ್ದೀರಿ ಅನ್ಯರಲ್ಲವೇ? 108 ಮಣಿಗಳ ಮಾಲೆಯೆಂದು ಜನರು ಹೇಳುತ್ತಾರೆ. ಆದರೆ ಬಾಪ್‌ದಾದಾರವರ ಕೊರಳಿನಲ್ಲಿ ನಿಮ್ಮೆಲ್ಲಾ ವಜ್ರಗಳ ಎಷ್ಟು ದೊಡ್ಡ ಮಾಲೆಯದೆ? 108 ಮಣಿಗಳಂತೂ ನೀವು ಕೆಳಗೆ ಕುಳಿತುಕೊಂಡಿರುವವರೇ ಆಗಿಬಿಡುವಿರಿ, ಹಿಂದೆ ಕುಳಿತುಕೊಂಡಿರುವವರೂ ಮಾಲೆಯ ಮಣಿ ಆಗಿದ್ದೀರಲ್ಲವೇ. ಮೊದಲು ಹಿಂದೆ ಕುಳಿತುಕೊಂಡಿರುವವರು. ನೋಡಿರಿ ತ್ಯಾಗದ ಪ್ರತ್ಯಕ್ಷ ಫಲವು ಯಾವುದು ಆಗಿದೆಯೆಂದರೆ, ಬಾಪ್‌ದಾದಾರವರು ಹಿಂದೆ ಕುಳಿತಿರುವವರಿಗೆ ಅಧಿಕ ಶುಭಾಶಯಗಳನ್ನು ನೀಡುತ್ತಾರೆ ಹಾಗೂ ಅವರಿಗಿಂತಲೂ ಹೆಚ್ಚು ಕೆಳಗೆ ಕುಳಿತಿರುವವರಿಗೆ.

ಬಾಪ್‌ದಾದಾರವರು ಪ್ರತಿಯೊಬ್ಬ ಮಕ್ಕಳ ವಿಶೇಷತೆಯನ್ನು ನೋಡುತ್ತಾರೆ. ಮಕ್ಕಳು ಸಂಪೂರ್ಣರಾಗಿಲ್ಲದಿರಬಹುದು. ಪುರುಷಾರ್ಥಿಯಾಗಿರಬಹುದು. ಆದರೆ ಯಾವುದೋ ಒಂದು ವಿಶೇಷತೆಯೂ ಇರದೇ ತಂದೆಯ ಮಕ್ಕಳು ಒಬ್ಬರೂ ಇಲ್ಲ. ಎಲ್ಲರಲ್ಲಿಯೂ ವಿಶೇಷತೆಯಿದೆ. ಎಲ್ಲಕ್ಕಿಂತಲೂ ಮೊದಲನೆಯ ವಿಶೇಷತೆಯಂತೂ ಕೋಟಿಯಲ್ಲಿ ಯಾರೋ ಒಬ್ಬೊಬ್ಬರ ಪಟ್ಟಿಯಲ್ಲಿಯಂತೂ ಇದ್ದೀರಲ್ಲವೇ. ಅನ್ಯ ವಿಶೇಷತೆಯು ಏನಿದೆಯೆಂದರೆ, ದೊಡ್ಡ ದೊಡ್ಡ ತಪಸ್ವಿಗಳು ಮಹಾನ್ ಆತ್ಮರು, 16,106 ಜಗದ್ಗುರು ಎಂದು ಕರೆಯಿಸಿಕೊಳ್ಳುವವರು, ಶಾಸ್ತ್ರವಾದಿಯಾಗಿರಬಹುದು ಅಥವಾ ಮಹಾಮಂಡಲೇಶ್ವರರಿರಬಹುದು ಆದರೆ ತಂದೆಯನ್ನು ತಿಳಿದುಕೊಂಡಿಲ್ಲ. ಆದರೆ ತಂದೆಯ ಮಕ್ಕಳೆಲ್ಲರೂ ತಂದೆಯನ್ನಂತೂ ತಿಳಿದುಕೊಂಡು ಬಿಟ್ಟಿದ್ದೀರಲ್ಲವೇ. ಹೀಗೆ ತಂದೆಯನ್ನು ಅರಿತುಕೊಳ್ಳುವುದು ಎಷ್ಟು ದೊಡ್ಡ ವಿಶೇಷತೆಯಾಗಿದೆ. ಹೃದಯದ ಅಂತರಾಳದಿಂದ ಮೇರಾ ಬಾಬಾ (ನನ್ನ ತಂದೆ) ಎಂದಂತೂ ಹೇಳುತ್ತೀರಲ್ಲವೇ ನನ್ನವರು ಎಂದು ಹೇಳಿ ಅಧಿಕಾರಿಯಂತೂ ಆಗಿಬಿಟ್ಟಿದ್ದೀರಲ್ಲವೇ. ಯಾರು ತಂದೆಯನ್ನು ಗುರುತಿಸಿಬಿಟ್ಟರೋ, ಅರಿತುಕೊಂಡು ಬಿಟ್ಟರೋ, ಹೀಗೆ ಅರಿತುಕೊಳ್ಳುವುದೂ ಸಹ ವಿಶೇಷತೆಯಾಗಿದೆ. ಪರಿಶೀಲಿಸುವ ಶಕ್ತಿಯಾಗಿದೆ. ಹೀಗೆ ನಿಮ್ಮೆಲ್ಲರಿಗೂ ಪರಿಶೀಲಿಸುವ ಶಕ್ತಿಯು ಶ್ರೇಷ್ಠವಾದುದು ಇದೆ. ಒಳ್ಳೆಯದು. ಈದಿನ ವಿಶೇಷವಾಗಿ ಆಚರಣೆ ಮಾಡಲು ಬಂದಿದ್ದೀರಲ್ಲವೇ. ಈದಿನ ಆನಂದೋತ್ಸವ ಆಚರಿಸುವ ದಿನವಾಗಿದೆ. ಆಗಿದೆಯಲ್ಲವೇ? ಅಥವಾ ಈ ದಿನವೂ ಮುರಳಿಯನ್ನು ಕೇಳುವ ದಿನವಾಗಿದೆಯೋ? ಕೇಳಲೂ ಬೇಕೇನು? ಒಳ್ಳೆಯದು.

ಜನರು ಶಿವರಾತ್ರಿಯೆಂದು ಕರೆಯುತ್ತಾರೆ. ಆದರೆ ನಿಮಗೆ ಈಗ ಏನಿದೆ? ರಾತ್ರಿಯಿದೆಯೇ? ನಿಮಗೆ ರಾತ್ರಿಯಿಲ್ಲದಿದ್ದರೆ ಇನ್ನೇನಿದೆ? ಸಂಗಮವಿದೆಯೇ? ಅಮೃತವೇಳೆಯಿದೆಯೇ? ನೀವಂತೂ ರಾತ್ರಿಯಿಂದ ಪಾರಾಗಿ ಬಂದಿದ್ದೀರಲ್ಲವೇ? ಅಥವಾ ಸ್ವಲ್ಪ ಸ್ವಲ್ಪ ರಾತ್ರಿಯು ಇನ್ನೂ ಇದೆಯೋ? ಬೀಳ್ಕೊಟ್ಟು ಹೋಯಿತೇನು? ಯಾವುದಾದರೊಂದು ಪ್ರಕಾರದ ಅಂಧಕಾರವು ಬರುತ್ತದೆಯೇ? ಅಥವಾ ಸಮಾಪ್ತಿಯಾಗಿ ಬಿಟ್ಟಿತೋ? ಅಮೃತವೇಳೆಯು ಸದಾ ವರದಾನದ ಸಮಯವಾಗಿರುವುದರಿಂದ ನಿಮಗೆ ಪ್ರತಿದಿನವೂ ಏನು ಸಿಗುತ್ತದೆ? ವರದಾನವು ದೊರೆಯುತ್ತದೆಯಲ್ಲವೇ?. ಆದ್ದರಿಂದ ತಂದೆಯು ರಾತ್ರಿಯಲ್ಲಿ ಬರುತ್ತಾರೆ. ಆದರೆ ನಮಗೆ ಅಮೃತವೇಳೆಯು ಗೋಲ್ಡನ್ ಮಾರ್ನಿಂಗ್ (ಸುವರ್ಣ ಸುಪ್ರಭಾತ) ಆಗಿಬಿಟ್ಟಿತು. ಡೈಮಂಡ್ ಮಾರ್ನಿಂಗ್ ಆಗಿಬಿಟ್ಟಿತು. ಎಂದು ನೀವು ಹೇಳುತ್ತೀರಿ. ಆದ್ದರಿಂದ ಇಂತಹ ನಿಮ್ಮ ವರದಾನೀ ಸ್ವರೂಪವನ್ನು ನೋಡಿಕೊಳ್ಳುತ್ತಿದ್ದೀರಾ? ಮಾಯೆಯು ವರದಾನವನ್ನು ಮರೆಸಿಬಿಡುವುದಿಲ್ಲ ತಾನೇ? ಮಾಯೆಯು ಬರುತ್ತದೆಯೇ? ಆಗಾಗ್ಗೆಯಂತೂ ಬರುತ್ತದೆಯೇ? ಮಾಯೆಯಂತೂ ಅಂತಿಮ ಘಳಿಗೆಯವರೆಗೆ ಬರುವುದು, ಸುಮ್ಮನೆ ಹೋಗುವುದಿಲ್ಲ. ಆದರೆ ಮಾಯೆಯ ಕರ್ತವ್ಯವು ಬರುವುದಾಗಿದೆ ಹಾಗೂ ನಿಮ್ಮ ಕರ್ತವ್ಯವು ದೂರದಿಂದ ಓಡಿಸುವುದಾಗಿದೆ. ಬರಬಾರದೇನು. ಆವರಿಸಿಬಿಟ್ಟು ಆಮೇಲೆ ಬಿಡಿಸುವುದು ಸರಿಯಲ್ಲ. ಆ ಸಮಯವು ಈಗ ಸಮಾಪ್ತಿಯಾಯಿತು. ಮಾಯೆಯು ಬರುವುದು ಹಾಗೂ ನಿಮ್ಮನ್ನು ಅಲುಗಾಡಿಸುವುದು ಆಮೇಲೆ ನೀವು ಓಡಿಸುವುದು ಇದರಲ್ಲಿ ಸಮಯವಂತೂ ವ್ಯರ್ಥವಾಗಿ ಕಳೆದುಹೋಯಿತಲ್ಲವೇ. ಆದರೆ ಶಾಂತಿಯ (ಯೋಗಶಕ್ತಿಯ) ಸಾಧನಗಳಿಂದ ನೀವು ದೂರದಿಂದಲೇ ಇದು ಮಾಯೆಯಾಗಿದೆ ಎಂಬುದನ್ನು ಗುರುತಿಸಲು ಸಾಧ್ಯವಿದೆ. ಇದರಲ್ಲಿಯೂ ಸಹ ಸಮಯವನ್ನು ವ್ಯರ್ಥ ಮಾಡಬೇಡಿರಿ. ಅಲ್ಲದೇ ಮಾಯೆಯೂ ಸಹ ಇವರು ಬರಲು ಅವಕಾಶವನ್ನಂತೂ ಕೊಡುತ್ತಾರಲ್ಲವೇ ಎನ್ನುವುದನ್ನು ತಿಳಿದಿರುವುದರಿಂದ ಅದಕ್ಕೆ ಬರುವುದೂ ಅಭ್ಯಾಸವಾಗಿ ಬಿಡುತ್ತದೆ. ಹೇಗೆ ಯಾವುದಾದರೂ ಪ್ರಾಣಿಗೆ ಏನಾದರೂ ಕೊಟ್ಟು ನಿಮ್ಮ ಮನೆಯೊಳಗೆ ಬರಲು ಅವಕಾಶ ಕೊಟ್ಟರೆ ಆಮೇಲೆ ಅದು ಪುನಃ ಪುನಃ ಬರುತ್ತತದೆ. ಬೇಸರವಾಗಿ ಓಡಿಸಿದರೂ ಸಹ ಅದಕ್ಕೆ ಬರುವುದು ಅಭ್ಯಾಸವಾಗಿ ಬಿಡುತ್ತದೆಯಲ್ಲವೇ ಹಾಗೆಯೇ ಅನೇಕ ಮಕ್ಕಳು ಚಹ(ಟೀ) ನೀರು ಮುಂತಾದುದನ್ನೂ ಕೊಟ್ಟು ಉಪಚರಿಸುತ್ತಾರೆಂದು ತಂದೆಯು ಹೇಳಿದ್ದರು. ಯಾವ ಚಹ-ನೀರನ್ನು ಕುಡಿಸುತ್ತೀರಿ? ಗೊತ್ತಿದೆಯಲ್ಲವೇ? ಏನು ಮಾಡಲಿ. ಹೇಗೆ ಮಾಡಲಿ, ನಾನು ಇನ್ನೂ ಪುರುಷಾರ್ಥಿಯಾಗಿದ್ದೇನೆ. ಇನ್ನೂ ಸಂಪೂರ್ಣ ಆಗಿಲ್ಲ. ಕೊನೆಯಲ್ಲಿ ಆಗಿಬಿಡುವೆನು ಎನ್ನುವ ಸಂಕಲ್ಪವು ಚಹ-ನೀರಾಗಿದೆ ಆದ್ದರಿಂದ ಚಹ- ನೀರಂತೂ ಯಾರಿಗಾದರೂ ದೊರೆಯುತ್ತದೆಯೆಂದು ಮಾಯೆಯು ನೋಡುತ್ತದೆ. ಯಾರಿಗಾದರೂ ಚಹಾ-ನೀರನ್ನು ಕೊಟ್ಟು ಸತ್ಕರಿಸಿದರೆ ಅವರು ಹೋಗುವರೇ? ಅಥವಾ ಕುಳಿತು ಬಿಡುವರೋ, ಹೀಗೆ ಯಾವಾಗ ಏನಾದರೂ ಪರಿಸ್ಥಿತಿಯು ಬಂದರೆ ಆಗ ಏಕೆ, ಏನು, ಹೇಗೆ. ಒಮ್ಮೊಮ್ಮೆಯಂತೂ ಆಗಿಯೇ ಆಗುತ್ತದೆ. ಇನ್ನೂ ಯಾರು ಪಾಸಾಗಿದ್ದಾರೆ. ಎಲ್ಲರ ಬಳಿಯೂ ಏನಾದರೂ ಲೋಪದೋಷವಿದ್ದೇ ಇದೆ - ಹೀಗೆ ತಿಳಿದುಕೊಳ್ಳುವುದು ಮಾಯೆಗೆ ಸತ್ಕಾರ ಮಾಡುವುದಾಗಿದೆ. ಸ್ವಲ್ಪ ಖಾರ-ಸಿಹಿಯನ್ನೂ ತಿನ್ನಿಸಿ ಬಿಡುತ್ತೀರಿ ಹಾಗೂ ಆಮೇಲೆ ಏನು ಮಾಡುತ್ತೀರಿ? ಆಮೇಲೆ ಮಾಯೆಯಿಂದ ಪೀಡಿಸಲ್ಪಟ್ಟು ಬೇಸವಾಗುವುದರಿಂದ, ಬಾಬಾ, ನೀವೇ ಓಡಿಸಿರಿ ಎಂದು ಹೇಳುತ್ತೀರಿ. ಬರುವುದಕ್ಕೆ ನೀವೇ ಅವಕಾಶ ಕೊಡುತ್ತೀರಿ. ಆದ್ದರಿಂದ ತಂದೆಯು ಏಕೆ ಓಡಿಸಬೇಕು. ನೀವು ಏಕೆ ಬರಗೊಡುತ್ತೀರಿ? ಮಾಯೆಯು ಪದೇ ಪದೇ ಏಕೆ ಬರುತ್ತದೆ?

ಪ್ರತಿಯೊಂದು ಸಮಯದಲ್ಲಿ ಪ್ರತಿಯೊಂದು ಕರ್ಮವನ್ನು ಮಾಡುತ್ತಾ ತ್ರಿಕಾಲದರ್ಶಿ ಸ್ಥಿತಿಯ ಸೀಟ್ (ಆಸನ)ನಲ್ಲಿ ಆಸೀನರಾಗುವುದಿಲ್ಲ ಅಥವಾ ಸ್ಥಿತರಾಗುವುದಿಲ್ಲ ತ್ರಿಕಾಲದರ್ಶಿ ಅರ್ಥಾತ್ ವರ್ತಮಾನ, ಭೂತ, ಭವಿಷ್ಯವನ್ನು ಅರಿತುಕೊಂಡಿರುವವರು, ಆದ್ದರಿಂದ ಏಕೆ, ಏನು ಎಂದು ಪ್ರಶ್ನೆ ಮಾಡಬೇಕಾಗುವುದಿಲ್ಲ, ತ್ರಿಕಾಲದರ್ಶಿಯಾಗಿರುವ ಕಾರಣ ಮುಂಚಿತವಾಗಿಯೇ ಈ ಸಮಸ್ಯೆ ಪರಿಸ್ಥಿತಿಗಳಂತೂ ಬರಲಿವೆ. ಆಗಲಿವೆ ಎನ್ನುವುದನ್ನು ತಿಳಿದುಕೊಂಡು ಬಿಡುತ್ತಾರೆ. ಸ್ವಯಂ ತಮ್ಮ ಮೂಲಕವಾಗಲೀ, ಅನ್ಯರ ಮೂಲಕವಾಗಲೀ, ಮಾಯೆಯ ಮೂಲಕವಾಗಲೀ ಅಥವಾ ಪ್ರಕೃತಿಯ ಮೂಲಕವಾಗಲಿ ಎಲ್ಲಾ ಪ್ರಕಾರದಿಂದ ಪರಿಸ್ಥಿತಿಗಳಂತೂ ಬರುವವು ಬರಲಿವೆ. ಆದರೆ ಸ್ವಸ್ಥಿತಿಯು ಶಕ್ತಿಶಾಲಿಯಾಗಿದ್ದರೆ ಪರಿಸ್ಥಿತಿಯು ಅದರ ಮುಂದೆ ಏನೂ ಮಾಡಲಾರದು. ಪರಿಸ್ಥಿತಿಯು ದೊಡ್ಡದೋ ಅಥವಾ ಸ್ವಸ್ಥಿತಿಯು ದೊಡ್ಡದೋ? ಯಾವುದು ದೊಡ್ಡದಾಗಿದೆ? ಒಮ್ಮೊಮ್ಮೆ ಸ್ವಸ್ಥಿತಿಯು ದೊಡ್ಡದಾಗಿ ಒಮ್ಮೊಮ್ಮೆ ಪರಿಸ್ಥಿತಿಯು ದೊಡ್ಡದಾಗುತ್ತದೆಯೇ? ಅಥವಾ ಆಗಾಗ ಆಗಿ ಬಿಡುತ್ತದೆಯೋ? ಆದ್ದರಿಂದ ಇದರಿಂದ ಪಾರಾಗಲು ಸಾಧನವು ಏನಾಗಿದೆಯೆಂದರೆ ಒಂದನೆಯದಾಗಿ ಆದಿ-ಮಧ್ಯ-ಅಂತ್ಯ ಮೂರೂ ಕಾಲಗಳನ್ನು ಪರಿಶೀಲನೆ ಮಾಡಿಕೊಂಡು ಆಮೇಲೆ ಏನಾದರೂ ಮಾಡಿರಿ. ಕೇವಲ ವರ್ತಮಾನವನ್ನು ನೋಡಬೇಡಿರಿ. ಕೇವಲ ವರ್ತಮಾನವನ್ನು ನೋಡಿದರೆ, ಒಮ್ಮೊಮ್ಮೆ ಪರಿಸ್ಥಿತಿಯು ದೊಡ್ಡದಾಗಿ ಬಿಡುತ್ತದೆ. ಒಮ್ಮೊಮ್ಮೆ ಸ್ವ-ಸ್ಥಿತಿಯು ದೊಡ್ಡದಾಗಿ ಬಿಡುತ್ತದೆ. ಪ್ರಪಂಚದ ಜನರೂ ಸಹ ಮೊದಲು ವಿಚಾರ ಮಾಡಿ ಆಮೇಲೆ ಕಾರ್ಯವನ್ನು ಮಾಡಿರೆಂದು ಹೇಳುತ್ತಾರೆ. ಇಲ್ಲದಿದ್ದರೆ ಏನು ವಿಚಾರ ಮಾಡಿ ಮಾಡುವುದಿಲ್ಲವೋ ಆಮೇಲೆ ವಿಚಾರ ಮಾಡುವುದು ಪಶ್ಚಾತ್ತಾಪದ ರೂಪವಾಗಿ ಬಿಡುತ್ತದೆ ಹೀಗೆ ಮಾಡಬಾರದಾಗಿತ್ತು, ಹಾಗೆ ಮಾಡಬೇಕಾಗಿತ್ತು. ಕಾರ್ಯವು ಮುಗಿದ ನಂತರ ವಿಚಾರ ಮಾಡುವುದು ಪಶ್ಚಾತ್ತಾಪವಾಗಿ ಬದಲಾಗಿ ಬಿಡುತ್ತದೆ. ಹಾಗೂ ಮುಂಚೆಯೇ ವಿಚಾರ ಮಾಡುವುದು ಜ್ಞಾನೀ ಆತ್ಮನ ಗುಣವಾಗಿದೆ. ದ್ವಾಪರ ಕಲಿಯುಗದಲ್ಲಂತೂ ಅನೇಕ ಪ್ರಕಾರದ ಪಶ್ಚಾತ್ತಾಪವನ್ನೇ ಮಾಡುತ್ತಾ ಬಂದಿದ್ದೀರಲ್ಲವೇ? ಆದರೆ ಈಗ ಸಂಗಮಯುಗದಲ್ಲಿ ಪಶ್ಚಾತ್ತಾಪ ಪಡುವುದು ಅರ್ಥಾತ್ ಜ್ಞಾನೀ ಆತ್ಮನಲ್ಲಿ ನಿಮ್ಮನ್ನು ಎಂತಹವರನ್ನಾಗಿ ಮಾಡಿಕೊಳ್ಳಬೇಕೆಂದರೆ. ನಿಮ್ಮಲ್ಲಿ ನಿಮಗೂ ಮನಸ್ಸಿನಲ್ಲಿ ಒಂದು ಸೆಕೆಂಡ್ ಸಹ ಪಶ್ಚಾತ್ತಾಪ ಆಗಬಾರದು.

ಹೀಗೆ ಈ ಡೈಮಂಡ್ - ಜೂಬ್ಲಿಯಲ್ಲಿ ವಿಶೇಷವಾಗಿ ಏನು ಗಮನವನ್ನು ಇಟ್ಟುಕೊಳ್ಳರೆಂದರೆ ಇಡೀ ದಿನದಲ್ಲಿ ವಿಶೇಷವಾಗಿ ಎರಡು ಖಜಾನೆಗಳು ಒಂದು ಸಮಯ ಹಾಗೂ ಇನ್ನೊಂದು ಸಂಕಲ್ಪ ಈ ಎರಡು ಖಜಾನೆಗಳ ಮೇಲೆ ಗಮನವಿಡಿ, ಖಜಾನೆಗಳೇನೋ ಅನೇಕವಿವೆ ಆದರೆ ವಿಶೇಷವಾಗಿ ಈ ಎರಡು ಖಜಾನೆಗಳ ಮೇಲೆ ಗಮನ ನೀಡಿರಿ. ಪ್ರತಿದಿನವೂ ಸಂಕಲ್ಪ ಶ್ರೇಷ್ಠ ಹಾಗೂ ಶುಭವಾದುದನ್ನು ಮಾಡಿ ಎಷ್ಟು ಜಮಾ ಮಾಡಿಕೊಂಡೆನು? ಏಕೆಂದರೆ ಪೂರ್ತಿ ಕಲ್ಪದ ಸಲುವಾಗಿ ಜಮಾ ಮಾಡಿಕೊಳ್ಳುವ ಬ್ಯಾಂಕ್ ಈಗ ತೆಗೆದಿರುತ್ತದೆ. ಸತ್ಯಯುಗದಲ್ಲಿ ಈ ಜಮಾ ಮಾಡಿಕೊಳ್ಳುವ ಬ್ಯಾಂಕ್ ಮುಚ್ಚಿ ಹೋಗಿರುತ್ತದೆ. ಈ ಬ್ಯಾಂಕ್ ಇರುವುದಿಲ್ಲ ಹಾಗೂ ಅನ್ಯ ಬ್ಯಾಂಕುಗಳೂ ಇರುವುದಿಲ್ಲ. ಅಲ್ಲಿ ಎಷ್ಟು ಧನವು ನಿಮ್ಮ ಬಳಿ ಇರುವುದೆಂದರೆ ಯಾರಿಂದಲೂ ಏನಾದರೂ ತೆಗೆದುಕೊಳ್ಳುವ ಅವಶ್ಯಕತೆಯೇ ಇರುವುದಿಲ್ಲ. ಬ್ಯಾಂಕಿನಲ್ಲಿ ಏಕೆ ಇಡುತ್ತಾರೆ? ಒಂದನೆಯದಾಗಿ ಸುರಕ್ಷತೆಯ ಸಲುವಾಗಿ ಹಾಗೂ ಇನ್ನೊಂದು ಬಡ್ಡಿಯು ದೊರೆಯುವುದರಿಂದ, ಅನೇಕರು ತುಂಬಾ

ಬುದ್ಧಿವಂತರಿರುತ್ತಾರೆ. ಅವರ ಜೀವನ ನಿರ್ವಹಣೆಯು ಬಡ್ಡಿಯಿಂದಲೇ ನಡೆಯುತ್ತಿರುತ್ತದೆ. ಹಾಗೂ ಈ ಸಮಯದಲ್ಲಿಯಂತೂ ಒಂದು ವೇಳೆ ಅಂತಹ ತಿಳುವಳಿಕೆಯುಳ್ಳವರಿದ್ದರೆ ಒಳ್ಳೆಯದು. ಜಮಾ ಮಾಡಿಕೊಳ್ಳುತ್ತಾರಲ್ಲವೇ. ಆದರೆ ಬಡ್ಡಿಯನ್ನು ಯಾವ ಕಾರ್ಯದ ಸಲುವಾಗಿ ಉಪಯೋಗಿಸುತ್ತಾರೆ ಎನ್ನುವುದನ್ನು ನೋಡಬೇಕಾಗುತ್ತದೆ. ಸತ್ಯಯುಗದಲ್ಲಿ ಈ ಬ್ಯಾಂಕೂ ಇರುವುದಿಲ್ಲ. ಆತ್ಮಿಕ ಖಜಾನೆಯನ್ನು ಸಂಗ್ರಹ ಮಾಡಿಕೊಳ್ಳುವ ಬ್ಯಾಂಕೂ ಇರುವುದಿಲ್ಲ. ಎರಡೂ ಬ್ಯಾಂಕುಗಳೂ ಇರುವುದಿಲ್ಲ. ಈ ಸಮಯದಲ್ಲಿ ಒಂದಕ್ಕೆ ಪದಮದಷ್ಟು ಮಾಡಿಕೊಳ್ಳುವ ಸಲುವಾಗಿ ಬ್ಯಾಂಕ್ ಇದೆ. ಆದರೆ ಒಂದು ಜಮಾ ಮಾಡಿದರೆ ಆಗ ಪದಮವು ದೊರೆಯುವುದು. ಸುಮ್ಮನೆ ದೊರೆಯುವುದಿಲ್ಲ. ಲೆಕ್ಕವಿದೆ ಆದ್ದರಿಂದ ಡೈಮಂಡ್ ಜೂಬ್ಲಿಯಲ್ಲಿ ಅಪ್ಪಟ ವಜ್ರವಾಗಲೇ ಬೇಕು ಎನ್ನುವುದಂತೂ ಪಕ್ಕಾ ನಿರ್ಧಾರವಿದೆಯಲ್ಲವೇ? ಅಥವಾ ಆಗಲು ಸಾಧ್ಯವಾಗುತ್ತದೆಯೋ ಇಲ್ಲವೋ ಎನ್ನುವ ಸಂಕಲ್ಪವು ಯಾವಾಗಲಾದರೂ ಬರುತ್ತದೆಯೇ? ಈ ಸಂಕಲ್ಪವು ಬರುವುದಿಲ್ಲವೇ? ಏನೇ ಆದರೂ. ತ್ಯಾಗ ಮಾಡಬೇಕಾದರೂ, ತಪಸ್ಸು ಮಾಡಬೇಕಾದರೂ, ನಿರ್ಮಾನ ಆಗಬೇಕಾದರೂ, ಏನೇ ಆಗಿಬಿಟ್ಟರೂ, ಸತ್ಯವಾದ ವಜ್ರವಾಗಲೇಬೇಕು. ಈ ನಿಶ್ಚಯವಿದೆಯೇ? ಹೇಳಿರಿ. ಹೌದು ಬಾಬಾ ಎಂದು ಹೇಳುವುದೇನೋ ತುಂಬಾ ಸಹಜ ಆಗಿದೆ. ಆದರೆ ಹೇಳಿದಂತೆ ಆಗುವುದರಲ್ಲಿ ಗಮನ ನೀಡಬೇಕಾಗುತ್ತದೆ. ಮೊಟ್ಟಮೊದಲನೆಯ ತ್ಯಾಗವು ಈಗಿನ ಸಮಯದ ಈ "ನಾನು" ಎನ್ನುವ ಶಬ್ದವಾಗಿದೆ. ತುಂಬಾ ಹಳೆಯ ಶಬ್ದ ಆಗಿದ್ದರೂ ಈಗಿನ ಸಮಯದಲ್ಲಿ ಈ "ನಾನು" ಎನ್ನುವ ಶಬ್ದವು ತುಂಬಾ ರಾಯಲ್ ರೂಪದ್ದಾಗಿ ಬಿಟ್ಟಿದೆ. ಈ "ನಾನು" ಎನ್ನುವ ಶಬ್ದವು ಸಮಾಪ್ತಿಯಾಗಿ ಭಾಷೆಯಲ್ಲಿಯೂ ಸಹ "ಬಾಬಾ, ಬಾಬಾ" ಎನ್ನುವ ಶಬ್ದವು ಬಂದು ಬಿಡಲಿ. ಹೇಳುವುದರಲ್ಲಿ ನೋಡಿರಿ ಸಾಧಾರಣ ಮಾತಾಗಿದೆ. ನಾನು ಯೋಗ್ಯನಾಗಿದ್ದೇನಲ್ಲವೇ. ಯೋಗ್ಯನಾಗಿರುವುದರಿಂದ ಸೌಕರ್ಯ ಅಥವಾ ಸೇವೆಯು ಅದೇ ಪ್ರಮಾಣದಲ್ಲಿ ದೊರೆಯಬೇಕು. ನಾನು ಯೋಗ್ಯನಾಗಿದ್ದೇನೆ, ನಾನು ಮಾಡುತ್ತೇನೆ ಎನ್ನುವುದು ಸರಿಯೇನು? ಮಾಡುವುದಂತೂ ನೀವೇ ಮಾಡುತ್ತೀರಲ್ಲವೇ ಹಾಗಾದರೆ ಮಾಡುವುದನ್ನೂ ಮಾಡುತ್ತೇನೆ ಎಂದು ಏಕೆ ಹೇಳಬಾರದು. ನಾನು ತಪ್ಪಾಗಿದ್ದೇನೆ. ನಾನು ಸರಿಯಾಗಿದ್ದೇನೆ. ನಾನು ಮಾಡುತ್ತೇನೆ ಎನ್ನುವುದು ಮಾತನನಾಡುವಾಗ ಬಂದು ಬಿಡುತ್ತದೆಯಲ್ಲವೇ. ನೀವು ಮಾಡುವುದಿಲ್ಲವೇ? ಬಾಬಾ ಮಾಡುತ್ತಾರೆಯೇ. ಆ ತಂದೆಯು ಕರಾವನ್ ಹಾರ್ (ಕರ್ತವ್ಯ ಮಾಡಿಸುವವರು) ಆಗಿದ್ದಾರೆ. ಆದರೆ ಕರನ್‌ಹಾರ್ (ಕರ್ಮ ಮಾಡುವವರು) ನೀವಾಗಿದ್ದೀರಲ್ಲವೇ. ಹಾಗಾದರೆ ನಾನು ಎಂದು ಹೇಳುವುದು ಏಕೆ ತಪ್ಪಾಯಿತು? ಸಾಮಾನ್ಯವಾಗಿ ನಾನು ಎನ್ನುವ ಶಬ್ದವನ್ನು ಪ್ರಯೋಗ ಮಾಡುವಾಗ ವಾಸ್ತವವಾಗಿ ನಾನು ಎನ್ನುವ ಶಬ್ದವು ಯಾರಿಗೆ ಅನ್ವಯಿಸುತ್ತದೆ? ಆತ್ಮನಿಗೋ ಅಥವಾ ಶರೀರಕ್ಕೋ? "ನಾನು" ಯಾರಾಗಿದ್ದೇನೆ? ಆತ್ಮನಾಗಿದ್ದೇನಲ್ಲವೇ. ಶರೀರವಂತೂ ಅಲ್ಲ. ತಾನೇ? ಆದ್ದರಿಂದ ದೇಹೀಅಭಿಮಾನಿಯಾಗಿ ನಾನು ಆತ್ಮನಾಗಿದ್ದೇನೆ ಎನ್ನುವ ಸ್ಮೃತಿಯಿಂದ ನಾನು ಎನ್ನುವ ಶಬ್ದವನ್ನು ಉಪಯೋಗಿಸಿದರೆ ಅದು ಸರಿಯಾಗಿದೆ. ಆದರೆ ನಾನು ಎನ್ನುವ ಶಬ್ದವನ್ನು ದೇಹ ಅಭಿಮಾನದ ರೂಪದಲ್ಲಿ ಒಂದುವೇಳೆ ಉಪಯೋಗಿಸಿದರೆ ತಪ್ಪಾಗುತ್ತದೆ. ಇಡೀ ದಿನದಲ್ಲಿ ಈ ನಾನು ಎನ್ನುವ ಶಬ್ದವು ತುಂಬಾ ಉಪಯೋಗದಲ್ಲಿ ಬರುತ್ತದೆ ಹಾಗೂ ಬರಲೇಬೇಕು. ಆದ್ದರಿಂದ ಏನು ಅಭ್ಯಾಸ ಮಾಡಬೇಕೆಂದರೆ ಯಾವಾಗ ನಾನು ಎನ್ನುವ ಶಬ್ದವನ್ನು ನುಡಿಯುತ್ತೀರೋ ಆಗ ನಾನು ಯಾರಾಗಿದ್ದೇನೆಂದರೆ ವಾಸ್ತವವಾಗಿಯೂ ನಾನು ಆತ್ಮನಾಗಿಯೇ ಇದ್ದೇನೆ ಎಂಬುದನ್ನು ಶರೀರಕ್ಕೆ ಯಾವಾಗಲಾದರೂ ನಾನು ಎಂದು ಹೇಳುತ್ತಾರೇಯೇ? ನನ್ನದು ಎಂದು ಹೇಳುತ್ತಾರೆ.

ಹೀಗೆ ನಾನು ಎನ್ನುವ ಶಬ್ದವನ್ನು ಒಂದುವೇಳೆ ಆತ್ಮಾಭಿಮಾನಿಯಾಗಿ ಹೇಳಿದರೆ ಆತ್ಮನಿಗೆ ತಂದೆಯು ಸ್ವತಃವಾಗಿ ನೆನಪಿರುತ್ತಾರೆ. ಹೇಳುವ ಅವಶ್ಯಕತೆಯೂ ಬರುವುದಿಲ್ಲ. ನಾನು ಆತ್ಮ ಆಗಿಯೇ ಇದ್ದೇನೆ ಎನ್ನುವ ಅಭ್ಯಾಸ ಮಾಡಿಕೊಂಡು ಬಿಡಿ. ಹೇಗೆ ಏನು ಅಭ್ಯಾಸವಾಗಿ ಬಿಟ್ಟಿದೆಯೆಂದರೆ, ನಾನು ಎನ್ನುವ ಶಬ್ದವನ್ನು ನುಡಿಯುವಾಗ ನಿಮ್ಮ ನಾಮ, ರೂಪವು ಸ್ಮೃತಿಯಲ್ಲಿ ಸ್ವಾಭಾವಿಕವಾಗಿ ಬರುತ್ತದೆಯಲ್ಲವೇ? ನಾನು ಯಾರಾಗಿದ್ದೇನೆ? ನಾನು ಇಂತಹವನಾ(ಳಾ)ಗಿದ್ದೇನೆ, ಹೀಗಿದ್ದೇನೆ, ಇದು ತಪ್ಪು ಅಭ್ಯಾಸವಾಗಿಬಿಟ್ಟಿದೆ ಹಾಗೂ ಸ್ವಾಭಾವಿಕವಾಗಿ ಬಿಟ್ಟದೆ. ವಿಚಾರ ಮಾಡಬೇಕಾಗುವುದಿಲ್ಲ. ಹೀಗೆ ಯಾವ ತಪ್ಪು ಭಾವದಿಂದ ನಾನು ಎನ್ನುವ ಶಬ್ದವನ್ನು ಉಪಯೋಗಿಸುತ್ತೀರೋ ಇದರ ಪರಿಣಾಮವಾಗಿ ಅಧಿಕ ಶ್ರಮ ಪಡಬೇಕಾಗುತ್ತದೆ ಹಾಗೂ ಪ್ರಾಪ್ತಿಯು ಕಡಿಮೆಯಾಗುತ್ತದೆ. ಅನೇಕ ಮಕ್ಕಳು ಹೇಳುತ್ತಾರೆ ನಾನಂತೂ ತುಂಬಾ ಸೇವೆ ಮಾಡುತ್ತೇನೆ. ತುಂಬಾ ಶ್ರಮಪಡುತ್ತೇನೆ. ಆದರೆ ಅಷ್ಟು ಪ್ರಾಪ್ತಿಯಾಗುವುದಿಲ್ಲ. ಇದರ ಕಾರಣವೇನು? ವರದಾನವು ಎಲ್ಲರಿಗೂ ಒಂದೇ ಇದೆಯೋ ಅಥವಾ ಬೇರೆ ಬೇರೆ ಇದೆಯೋ? 60 ವರ್ಷದ ಮಕ್ಕಳಿಗೂ ಅಥವಾ ಒಂದು ತಿಂಗಳಿನ ಮಗುವಿಗೂ ಒಂದೇ ವರದಾನವಿದೆ. ಖಜಾನೆಯು ಎಲ್ಲರಿಗೂ ಒಂದೇ ಸಮಾನವಾಗಿ ಇದೆ. ದಿನಚರಿ, ಮರ್ಯಾದೆಗಳು ಎಲ್ಲರಿಗೂ ಒಂದೇ ಸಮಾನ ಇವೆ. ಬೇರೆ ಬೇರೆಯಂತೂ ಇಲ್ಲ ತಾನೇ. ವಿದೇಶದವರಿಗೇ ಮರ್ಯಾದೆಗಳು ಪ್ರತ್ಯೇಕವಾದವೇನೂ ಇಲ್ಲ ಹಾಗೂ ಭಾರತದವರಿಗೆ ಪ್ರತ್ಯೇಕವಾದ ಮರ್ಯಾದೆಗಳೇನೂ ಇಲ್ಲ. ಸ್ವಲ್ಪ ಸ್ವಲ್ಪ ವ್ಯತ್ಯಾಸವಿದೆಯೇ? ಇಲ್ಲವೇ? ಹೀಗೆ ಎಲ್ಲವೂ ಒಂದೇ ಇರುವಾಗ ಒಬ್ಬರಿಗೆ ಸಫಲತೆಯು ದೊರೆಯುತ್ತದೆ. ಇನ್ನೊಬ್ಬರಿಗೆ ಕಡಿಮೆ ಸಫಲತೆಯು ದೊರೆಯುತ್ತದೆ ಏಕೆ? ಕಾರಣವೇನು? ತಂದೆಯು ಕಡಿಮೆ ಸಹಾಯ ನೀಡುತ್ತಾರೇಯೇ? ಒಬ್ಬೊಬ್ಬರಿಗೆ ಜಾಸ್ತಿ ಕೊಡುತ್ತಾರೆ. ಒಬ್ಬೊಬ್ಬರಿಗೆ ಕಡಿಮೆ ಕೊಡುತ್ತಾರೆ. ಹೀಗೆ ಮಾಡುತ್ತಾರೇಯೇ? ಇಲ್ಲವೇ? ಹಾಗಾದರೆ ಏಕೆ ಆಗುತ್ತದೆ? ಇದರ ಅರ್ಥವೇನಾಗಿದೆಯೆಂದರೆ ತಮ್ಮದೇ ತಪ್ಪಿದೆ. ನಾನು ಎನ್ನುವ ಅಭಿಮಾನವು ಬಂದುಬಿಡುತ್ತದೆ. ದೇಹಾಭಿಮಾನ ಅಥವಾ ಯಾರು ಸಾಥಿಯಿದ್ದಾರೋ ಅವರಿಗೆ ದೊರೆಯುವ ಸಫಲತೆಯನ್ನು ನೋಡಿ ಒಮ್ಮೊಮ್ಮೆ ಅಸೂಯೆಯೂ ಬಂದು ಬಿಡುತ್ತದೆ. ಆ ಅಸೂಯೆಯ ಕಾರಣ ಏನು ಮನಃಪೂರ್ವಕವಾಗಿ ಸೇವೆ ಮಾಡಬೇಕೋ ಅದನ್ನು ಬುದ್ಧಿಯಿಂದ ಮಾಡುತ್ತಾರೆ. ಆದರೆ ಮನಸ್ಸಿಟ್ಟು ಮಾಡುವುದಿಲ್ಲ. ಮನಸ್ಸಿನಿಂದ ಮಾಡಿರುವ ಸೇವೆಗೆ ಫಲವು ದೊರೆಯುತ್ತದೆ. ಹಲವು ಸಲ ಮಕ್ಕಳು ಬುದ್ಧಿಯನ್ನು ಉಪಯೋಗಿಸುತ್ತಾರೆ. ಆದರೆ ಮನಸ್ಸು ಹಾಗೂ ಬುದ್ಧಿ ಎರಡನ್ನೂ ಬಳಸಿಕೊಂಡು ಸೇವೆ ಮಾಡುವುದಿಲ್ಲ. ಬುದ್ಧಿಯು ದೊರೆತಿದೆ. ಅದನ್ನು ಕಾರ್ಯದಲ್ಲಿ ತೊಡಗಿಸುವುದು" - ಒಳ್ಳೆಯದಾಗಿದೆ. ಆದರೆ ಕೇವಲ ಬುದ್ಧಿಯನ್ನಲ್ಲ ಯಾರು ಮನಸ್ಸಿನಿಂದ ಸೇವೆ ಮಾಡುತ್ತಾರೋ ಅವರಿಗೆ ತಂದೆಯ . ನೆನಪು ಸಹ ಮನಸ್ಸಿನಲ್ಲಿರುತ್ತದೆ. ಯಾರು ಕೇವಲ ಬುದ್ಧಿಯಿಂದ ಸೇವೆ ಮಾಡುತ್ತಾರೋ ಅವರಿಗೆ ಸ್ವಲ್ಪ ಸಮಯ ಬುದ್ಧಿಯಲ್ಲಿ ಹೌದು ಬಾಬಾರೇ ಮಾಡಿಸುವವರಾಗಿದ್ದಾರೆ ಎಂದು ನೆನಪಿರುತ್ತದೆ. ಆದರೆ ಸ್ವಲ್ಪ ಸಮಯದ ನಂತರ ಅದೇ ನನ್ನ-ತನವು ಬಂದುಬಿಡುತ್ತದೆ. ಆದ್ದರಿಂದ ಬುದ್ಧಿ ಹಾಗೂ ಮನಸ್ಸು ಇವೆರಡರ ಬ್ಯಾಲೆನ್ಸ್ (ಸಮತೋಲನ) ಇಟ್ಟುಕೊಳ್ಳಿರಿ .

ಹೀಗೆ ಡೈಮಂಡ್ ಜೂಬ್ಲಿಯಲ್ಲಿ ಏನು ಮಾಡಬೇಕು ಎನ್ನುವುದನ್ನು ತಿಳಿಸಿದ್ದಾರೆ ವಿಶೇಷವಾಗಿ ಉಳಿತಾಯದ ಖಾತೆಯನ್ನು ಜಮಾ ಮಾಡಿಕೊಳ್ಳಿರಿ. ಇಡೀ ದಿನದಲ್ಲಿ ನನ್ನಿಂದ ಯಾವ ಅಂತಹ ತಪ್ಪೂ ಅಗಲಿಲ್ಲ. ಯಾರಿಗೂ ದುಃಖವನ್ನು

ಕೊಡಲಿಲ್ಲ. ಯಾರೊಂದಿಗೂ ಏನೂ ಘರ್ಷಣೆಯಾಗಲಿಲ್ಲ ಅರ್ಥಾತ್ ಕಳೆದುಕೊಳ್ಳಲಿಲ್ಲ. ಎನ್ನುವುದರಲ್ಲಿಯೇ ತೃಪ್ತರಾಗಬೇಡಿರಿ. ಇದೇನೋ ಒಳ್ಳೆಯದನ್ನು ಮಾಡಿದಿರಲ್ಲವೇ ಕಳೆದುಕೊಳ್ಳಲಿಲ್ಲ ಎನ್ನುವುದೇನೋ ಒಳ್ಳೆಯದಾಯಿತು. ಆದರೆ ಜಮಾ ಮಾಡಿಕೊಂಡಿದ್ದೀರಾ? ಸೇವೆಯನ್ನೂ ಮಾಡಿದ್ದರೆ. ನಿಮ್ಮ ಅತ್ಮೀಯತೆಯಿಂದ ಸೇವೆಯಲ್ಲಿ ಸಫಲತೆಯನ್ನು ಪ್ರಾಪ್ತಿ ಮಾಡಿಕೊಂಡಿದ್ದೀರಾ? ಅಥವಾ ಸಫಲತೆ ಜಮಾ ಮಾಡಿಕೊಂಡಿದ್ದೀರಾ? ಸೇವೆಯಲ್ಲಿ ಸಮಯವನ್ನು ವಿನಿಯೋಗಿಸಿದಿರಿ ಎನ್ನುವುದೇನೋ, ಒಳ್ಳೆಯದನ್ನು ಮಾಡಿದಿರಿ. ಆದರೆ ಸೇವೆಯನ್ನು ಯಾವ ವಿಧಿಯಿಂದ ಮಾಡಿದಿರಿ? ಅನೇಕರು ಏನು ಹೇಳುತ್ತಾರೆಂದರೆ - ನಾನಂತೂ ಇಡೀ ದಿನವೂ ಸೇವೆಯಲ್ಲಿ ಎಷ್ಟು ಬಿಜಿಯಾಗಿರುತ್ತೇನೆಂದರೆ (ವ್ಯಸ್ತನಾಗಿರುತ್ತೇನೆಂದರೆ) ನನ್ನ ಬಗ್ಗೆ ಧ್ಯಾನವೇ ಇರುವುದಿಲ್ಲ. ಬಿಜಿಯಾಗಿರುವುದೇನೋ ತುಂಬಾ ಒಳ್ಳೆಯದಾಗಿದೆ. ಆದರೆ ಸೇವೆಯ ಪ್ರತ್ಯಕ್ಷ ಫಲವು ಜಮಾ ಆಯಿತೇ? ಅಥವಾ ಕೇವಲ ಶ್ರಮಪಟ್ಟರೂ ಸೇವೆಯಲ್ಲಿ 8 ಗಂಟೆಯ ಸಮಯವನ್ನು ವಿನಿಯೋಗಿಸಿದಿರಿ. ಆದರೆ ಎಂಟು ಗಂಟೆಯೂ ಸೇವೆಯದು ಜಮಾ ಆಯಿತೇ? ಸಮಯವು ಜಮಾ ಆಯಿತೇ' ಅಥವಾ ಅರ್ಧದಷ್ಟು ಜಮಾ ಆಗಿ. ಇನ್ನರ್ಧದಷ್ಟು ಓಡಾಟದಲ್ಲಿ. ಯೋಚನೆಯಲ್ಲಿ ಕಳೆದುಹೋಯಿತೋ? ಶ್ರೇಷ್ಠ ಸಂಕಲ್ಪ, ಶುಭ ಭಾವನೆ, ಶುಭ ಕಾಮನೆಯಿಂದ ಜಮಾ ಆಗುತ್ತದೆ. ಹೀಗೆ ಇಡೀ ದಿನದಲ್ಲಿ ಜಮಾದ ಖಾತೆಯನ್ನು ಬರೆದಿಡಿ. ಯಾವಾಗ ಖಾತೆಯು ಬೆಳೆಯುತ್ತಾ ಹೋಗುತ್ತದೆಯೋ ಆಗ ಸ್ವತಃವಾಗಿಯೇ ಡೈಮಂಡ್ ಆಗಿಯೇ ಬಿಡುವಿರಿ. ಇನ್ನೂ ನಿಮ್ಮ ಸಮಯ ಹಾಗೂ ಸಂಕಲ್ಪಗಳು ಒಳ್ಳೆಯದರಲ್ಲಿಯೂ ಸೇರುವುದಿಲ್ಲ. ಕೆಟ್ಟದ್ದರಲ್ಲಿಯೂ ಸೇರುವುದಿಲ್ಲ. ಕೆಟ್ಟದ್ದರಲ್ಲಿ ಜಮಾ ಆಗಲಿಲ್ಲ ಎನ್ನುವುದರಿಂದ ಪಾರಾಗಿ ಬಿಟ್ಟಿರಿ. ಆದರೆ, ಒಳ್ಳೆಯದರಲ್ಲಿ ಜಮಾ ಆಯಿತೇ? ತಿಳಿಯಿತೇ. ಸಮಯವನ್ನು, ಸಂಕಲ್ಪವನ್ನು ಉಳಿತಾಯ ಮಾಡಿರಿ, ಈಗ ಎಷ್ಟು ಈ ಉಳಿತಾಯ ಮಾಡುತ್ತೀರೋ, ಜಮಾ ಮಾಡಿಕೊಳ್ಳುತ್ತೀರೋ ಇಡೀ ಕಲ್ಪವೂ ಅದರ ಅನುಸಾರವಾಗಿಯೇ ರಾಜ್ಯಭಾರವನ್ನೂ ಮಾಡುವಿರಿ ಹಾಗೂ ಪೂಜ್ಯರೂ ಆಗುವಿರಿ. ದ್ವಾಪರ ಯುಗದಿಂದಲೇನೋ ನೀವು ಸಾಕಾರ ರೂಪದಲ್ಲಿ ಕ್ಷೀಣಿಸುವ ಕಲೆಯಲ್ಲಿ ಬರುತ್ತೀರಿ. ಆದರೆ ನೀವು ಜಮಾ ಮಾಡಿಕೊಂಡಿರುವ ಖಾತೆಯು ನಿಮ್ಮ ಜಡಚಿತ್ರಗಳ ಪೂಜೆ ಮಾಡಿಸುತ್ತದೆ. ಹೀಗೆ ಎಲ್ಲರೂ ಇದನ್ನು ಬರೆದಿಟ್ಟರೆ. ವ್ಯರ್ಥ ಅಥವಾ ಸಾಧಾರಣ ಸಮಯವು ಎಷ್ಟು ವ್ಯತೀತವಾಗುತ್ತದೆ ಎನ್ನುವುದು ಗೊತ್ತಾಗಿ ಬಿಡುತ್ತದೆ. ಸಾಧಾರಣ ಸಂಕಲ್ಪಗಳು ಎಷ್ಟು ಉತ್ಪನ್ನವಾಗುತ್ತವೆ? ಆದರೆ ಒಂದು ಗಮನ ಇಟ್ಟುಕೊಳ್ಳಿರಿ - ಒಂದುವೇಳೆ ಈ ದಿನ ನಿಮ್ಮ ಜಮಾದ ಖಾತೆಯು ತುಂಬಾ ಕಡಿಮೆ ಆದರೆ, ಕಡಿಮೆಯಾಗಿದ್ದನ್ನು ನೋಡಿ ವ್ಯಾಕುಲರಂತೂ ಆಗಿಬಿಡುವಿರಲ್ಲವೇ? ಆಗುವಿರಾ? ವ್ಯಾಕುಲರಾಗಬೇಡಿರಿ. ಅದಕ್ಕೆ ಬದಲಾಗಿ ಏನು ತಿಳಿದುಕೊಳ್ಳ ಬೇಕೆಂದರೆ, ಜಮಾ ಮಾಡಿಕೊಳ್ಳುವುದಕ್ಕೆ ನನಗೆ ಇನ್ನೂ ಅವಕಾಶವಿದೆಯೆಂದು ಹೀಗೆ ನಿಮ್ಮನ್ನು ಉತ್ಸಾಹ ಉಲ್ಲಾಸದಲ್ಲಿ ತಂದುಕೊಳ್ಳಿರಿ. ನಿಮ್ಮೊಂದಿಗೆ ನೀವು ಸ್ಪರ್ಧೆಯನ್ನಿಡಿ. ಅನ್ಯರೊಂದಿಗೆ ಸ್ಪರ್ಧೆ ಮಾಡಬೇಡಿರಿ. ಈದಿನ ಒಂದುವೇಳೆ ಎಂಟು ಗಂಟೆ ಜಮಾ ಆದರೆ ನಾಳೆ 10 ಗಂಟೆ ಜಮಾ ಮಾಡಿಕೊಳ್ಳಿರಿ. ವ್ಯಾಕುಲರಾಗಬೇಡಿರಿ? ಏಕೆಂದರೆ ಜಮಾ ಮಾಡಿಕೊಳ್ಳುವ ಸಲುವಾಗಿ ಈಗಲೂ ಇನ್ನೂ ಸಮಯವಿದೆ. ಇನ್ನೂ ಟೂಲೇಟ್‌ನ (ವೇಳೆ ಮೀರಿ ಹೋಯಿತು ಎನ್ನುವ) ಬೋರ್ಡ್ ಹಾಕಲ್ಪಟ್ಟಿಲ್ಲ. ಅಂತಿಮ ಫಲಿತಾಂಶದ ಸಮಯವು ಇನ್ನೂ ಪ್ರಕಟಿಸಲ್ಪಟ್ಟಿಲ್ಲ. ಹೇಗೆ ಲೌಕಿಕದಲ್ಲಿ ಪರೀಕ್ಷೆಯ ದಿನಾಂಕವು ಗೊತ್ತು ಮಾಡಲಟ್ಟರೆ ಒಳ್ಳೆಯ ಪುರುಷಾರ್ಥಿಯು ವ್ಯಾಕುಲನಾಗುತ್ತಾನೋ ಅಥವಾ ಪುರುಷಾರ್ಥವನ್ನು ದ್ವಿಗುಣಗೊಳಿಸುತ್ತಾನೋ? ಹಾಗೆಯೇ ನೀವೂ ಸಹ ವ್ಯಾಕುಲರಾಗಬೇಡಿರಿ. ಇನ್ನೂ ಉತ್ಸಾಹ-ಉಲ್ಲಾಸದಲ್ಲಿ ಬಂದು ಯಾವ

ದೃಢ ಸಂಕಲ್ಪ ಮಾಡಬೇಕೆಂದರೆ, ನಾನು ನನ್ನ ಜಮಾದ ಖಾತೆಯನ್ನು ವೃದ್ಧಿ ಮಾಡಿಕೊಳ್ಳಲೇಬೇಕು ಎಂದು. ತಿಳಿಯಿತೇ? ವ್ಯಾಕುಲರ ಆಗುವುದಿಲ್ಲ ತಾನೆ ವ್ಯಾಕುಲರಾದರೆ ಆಮೇಲೆ ತಂದೆಯು ಪರಿಶ್ರಮಿಸಬೇಕಾಗುತ್ತದೆ. ಆಗ ದೊಡ್ಡ ದೊಡ್ಡ ಪತ್ರಗಳನ್ನು ಬರೆಯಲು ಪ್ರಾರಂಭ ಮಾಡಿಬಿಡುವಿರಿ ಬಾಬಾ ಏನಾಗಿಬಿಟ್ಟಿತು, ಹೀಗಾಗಿ ಬಿಟ್ಟಿತು ಎಂದು. ಬಾಬಾ ರಕ್ಷಿಸಿ, ರಕ್ಷಿಸಿ ಎಂದು ಕೇಳಬೇಡಿರಿ. ನಿಮ್ಮ ಜಡ ಚಿತ್ರಗಳಿಂದ ಮನುಷ್ಯರು ನನ್ನನ್ನು ರಕ್ಷಿಸಿರಿ ಎಂದು ಬೇಡುತ್ತಿದ್ದಾರೆ. ಆದ್ದರಿಂದ ನೀವು ರಕ್ಷಿಸುವವರಾಗಿದ್ದೀರಿ ರಕ್ಷಿಸು ರಕ್ಷಿಸು ಎಂದು ಹೇಳುವವರಲ್ಲ.

ನಮ್ಮ ಪೂಜೆಯೂ ಆಗುತ್ತದೆಯೆಂದು ಡಬಲ್ ವಿದೇಶೀಯರು ತಿಳಿದುಕೊಂಡಿದ್ದೀರಾ? ಅಥವಾ ಕೇವಲ ಭಾರತದವರ ಪೂಜೆಯು ಆಗುತ್ತದೆಯೋ? ಯಾರ ಪೂಜೆಯು ಆಗುತ್ತದೆ? ಆದ್ದರಿಂದ ಸದಾ ನಿಮ್ಮ ರಾಜ್ಯಾಧಿಕಾರಿಯ ಸ್ವರೂಪ ಹಾಗೂ ಪೂಜ್ಯ ಸ್ವರೂಪ "ನಾನು ಪೂಜ್ಯ ಆತ್ಮನಾಗಿದ್ದೇನೆ". ಅನ್ಯರಿಗೆ ನೀಡುವ ದಾತಾ ಆಗಿದ್ದೇನೆ. ತೆಗೆದುಕೊಳ್ಳುವವನಲ್ಲ, ದೇವತೆಯಾಗಿದ್ದೇನೆ ಎನ್ನುವ ಸ್ಮೃತಿ ಇಟ್ಟುಕೊಳ್ಳಿರಿ. ತಂದೆಯಂತೂ ತಾನಾಗಿಯೇ ಕೊಟ್ಟೆನಲ್ಲವೇ. ಅಥವಾ ನೀವು ಬೇಡಿದ್ದರಿಂದ ಕೊಟ್ಟರೋ? ನಿಮಗೆ ಬೇಡುವುದೂ ಬರುತ್ತಿರಲಿಲ್ಲ. ಬರುತ್ತಿತ್ತೇ? ಭಕ್ತಿಯಲ್ಲಿ ಏನು ಬೇಡುತ್ತಿದ್ದಿರಿ? ಒಂದು ಗಂಡು ಮಗುವನ್ನು ಕೊಟ್ಟುಬಿಡು, ಅಥವಾ ಪರೀಕ್ಷೆಯಲ್ಲಿ ಪಾಸು ಮಾಡಿಸು ಅಥವಾ ಒಂದು ಮನೆಯನ್ನು ಕೊಟ್ಟುಬಿಡು ಎಂದು ಬೇಡುತ್ತಿದ್ದೀರಿ. ಅಧಿಕಾರಿಯೆಂದು ತಿಳಿದುಕೊಂಡಿರಲಿಲ್ಲ. ಪಾರಲೌಕಿಕ ತಂದೆಯು ವಾರಸತ್ವವದ ರೂಪದಲ್ಲಿ ಎಲ್ಲವನ್ನೂ ಕೊಟ್ಟುಬಿಟ್ಟರು. ಸ್ವಲ್ಪವಾದರೂ ಇಟ್ಟುಕೊಂಡರೇ? ನೀವು ಬೇಡದೆಯೇ ಕೊಟ್ಟಿದ್ದಾರೆ. ನಾವು ವಿಶ್ವದ ರಾಜಾ ಆಗಬಹುದು ಎಂಬುದನ್ನು ಎಂದಾದರೂ ಯೋಚಿಸಲು ಸಾಧ್ಯವಿತ್ತೇ? ಸಂಗಮಯುಗೀ ಬ್ರಾಹ್ಮಣರಾಗುತ್ತೇವೆ ಎಂದು ಯಾವಾಗಲದರೂ ಯೋಚಿಸಿದ್ದೀರಾ? ಆದ್ದರಿಂದ ಜಮಾ ಮಾಡಿಕೊಳ್ಳಿರಿ ಏಕೆಂದರೆ ಬಾಪ್‌ದಾದಾ ನೋಡಿದರು, ಬಹಳ ಶ್ರಮಪಡುತ್ತಿದ್ದಾರೆ ಆದರೆ ಜಮಾ ಖಾತೆ ಎಷ್ಟಿರಬೇಕೋ ಅಷ್ಟು ಇಲ್ಲ. ದಿನಾಂಕ ಪ್ರಕಟಿಸಲ್ಪಟ್ಟಾಗ ನಮಗೆ ಗೊತ್ತಿದ್ದರೆ ನಾವು ಜಮಾ ಮಾಡಿಕೊಳ್ಳುತ್ತಿದ್ದೆವು, ಗೊತ್ತೇ ಇರಲಿಲ್ಲ ಎಂದು ನೀವು ಹೇಳಬಹುದು. ಮಾಡಿಬಿಡುತ್ತಿದ್ದೆವು ಎಂದು ಹೇಳಬಹುದು. ಆದ್ದರಿಂದ ಈ ಡೈಮಂಡ್ ಜೂಬ್ಲಿಯಲ್ಲಿ ಸ್ಮೃತಿಯ ಮೂಲಕ, ಸೇವೆಯ ಮೂಲಕ, ಶುಭಭಾವನೆ, ಶುಭ ಕಾಮನೆಯಿಂದ ಖಾತೆಯನ್ನು ಜಮಾ ಮಾಡಿಕೊಳ್ಳಿರಿ. ಬೇಕೆಂಬುದನ್ನು ತಿಳಿದುಕೊಂಡಿದ್ದೀರಾ? ಸಂಪಾದನೆ ಮಾಡಿಕೊಳ್ಳಿರಿ. ಬಾಪ್‌ದಾದಾರವರ ಬಳಿಯಂತೂ ಎಲ್ಲರ ಖಾತೆಯೂ ತಲುಪಿಯೇ ಬಿಡುತ್ತದೆ. ಒಂದು ಮಾಸದ ಫಲಿತಾಂಶವನ್ನು ನಿಮಗೆ ನೀವೇ ನೋಡಿಕೊಳ್ಳಿರಿ. ಪತ್ರ ಬರೆದು ಕಳುಹಿಸುವುದು ಬೇಡ. ಇದನ್ನು ಸ್ವಯಂ ನೀವೇ ಪರಿಶೀಲನೆ ಮಾಡಿಕೊಳ್ಳಿರಿ ಹಾಗೂ ಪರಿಶೀಲನೆ ಮಾಡಿಕೊಂಡು ಏನು ಮಾಡಬೇಕು? ಪರಿವರ್ತನೆ ಮಾಡಿಕೊಳ್ಳಿರಿ. ವ್ಯಾಕುಲರಾಗಬೇಡಿರಿ, ಯಾವಾಗ ತಂದೆಯು ಜೊತೆಯಲ್ಲಿ ಇದ್ದಾರೆಯೋ ಆಗ ತಂದೆಯನ್ನು ಉಪಯೋಗಿಸಿಕೊಳ್ಳಿರಿ. ತಂದೆಯನ್ನು ಕಡಿಮೆ ಉಪಯೋಗಿಸಿಕೊಳ್ಳುತ್ತೀರಿ. ಕೇವಲ ತಂದೆಯು ಜೊತೆಯಲ್ಲಿದ್ದಾರೆ. ತಂದೆಯು ಜೊತೆಯಲ್ಲಿ ಇದ್ದಾರೆಂದು ಹೇಳುತ್ತೀರಿ. ತಂದೆಯನ್ನು ಉಪಯೋಗಿಸಿಕೊಳ್ಳಿರಿ. ಯಾವಾಗ ಸರ್ವಶಕ್ತಿವಂತನು ಜೊತೆಯಲ್ಲಿದ್ದಾರೆಯೋ ಆಗ ಸಫಲತೆಯು ನಿಮ್ಮ ಚರಣಗಳಲ್ಲಿ ಬಂದು ಬೀಳಬೇಕು.

ಒಳ್ಳೆಯದು, ಕಂಬೈಂಡ್ ಸ್ವರೂಪವೆಂದು ಹೇಳುತ್ತೀರಲ್ಲವೇ. ಶಿವಜಯಂತಿಗೆ ಸಂಬಂಧಿಸಿ ನಿಮ್ಮ ಕಂಬೈಂಡ್ ಸ್ವರೂಪದ ಯಾವ ವರ್ಣನೆಯಿದೆ? ತಿಳಿದುಕೊಂಡಿದ್ದೀರಾ? ಶಿವರಾತ್ರಿಗೆ ಸಂಬಂಧಿಸಿ ನಿಮ್ಮ ಯಾವ ಕಂಬೈನ್ಡ್ ರೂಪದ ಮಹಿಮೆ(ಗಾಯನ)ಯನ್ನು ಮಾಡಲಾಗುತ್ತದೆ? (ಶಿವಶಕ್ತಿ) ಇದು ಪಕ್ಕಾ ಆಗಿದೆಯೇ ಅಥವಾ ಶಕ್ತಿಯು ಬೇರೆ, ಶಿವನು ಬೇರೇ ಇದ್ದಾರೆಯೇ? ಶಿವಶಕ್ತಿಯ ಅರ್ಥವೇ ಕಂಬೈಂಡ್ ಆಗಿದ್ದೇವೆ ಎನ್ನುವುದಾಗಿದೆ ಬೇರೆಯಾಗಿರುವುದಲ್ಲ. ಹಾಗಾದರೆ ಹೇಗೆ ಅಗಲಿಸುತ್ತೀರಿ. ಸಾಧ್ಯವಿದೆಯೇ? ಮತ್ತೆ ಹೇಗೆ ಬೇರೆ ಆಗುತ್ತದೆ? ಜೋಡಿಯಾಗಿ ಇದ್ದ ನಂತರ ಅವರು ಬೇರೆಯಾಗುವುದಿಲ್ಲ ಆದರೆ ಮಾಯೆಯು ಅವರ ಮುಖವನ್ನು ತಿರುಗಿಸಿಬಿಡುತ್ತದೆ. ಆದ್ದರಿಂದ ಬೇರೆಯಾಗುತ್ತಿದ್ದಾರೆ. "ನಾನು ಶಿವಶಕ್ತಿ" ಎಂಬ ಸ್ಮೃತಿ ಇಂದಿನ ಶಿವ ಜಯಂತಿಯ ಸ್ಮೃತಿ ಚಿಹ್ನೆಯಾಗಿದೆ. ಪಾಂಡವರು ಏನಾಗಿದ್ದೀರಿ? ನೀವು ಸಹ ಶಿವಶಕ್ತಿ ಆಗಿದ್ದೀರೋ ಇಲ್ಲವೋ? ಶಿವ ಪಾಂಡವರಾಗಿದ್ದೀರಾ? ಏನಾಗಿದ್ದೀರಿ? ಶಕ್ತಿಯರಂತೂ ಆಗಿದ್ದೀರಲ್ಲವೇ? ಒಳ್ಳೆಯದು -

ಭವಿಷ್ಯದಲ್ಲಿ ಏನು ಸೇವೆ ಆಗಲಿದೆಯೆಂದು ಮಕ್ಕಳು ಕೇಳಿದ್ದರು. ತಂದೆಯು ಮುಂಚೆಯೂ ಏನು ಹೇಳಿದ್ದೆನೆಂದರೆ, ಎಲ್ಲಿಯವರೆಗೆ ಸಾಧ್ಯವಿದೆಯೋ ಅಲ್ಲಿಯವರೆಗೆ ತಯಾರಾಗಿರುವ ವೇದಿಕೆಯ ಮೇಲೆ ನೀವು ಚೀಫ್ ಗೆಸ್ಟ್ (ಮುಖ್ಯ ಅತಿಥಿ) ಆಗಿ ಈ ಸೇವೆಯನ್ನು ಇನ್ನೂ ವೃದ್ಧಿಮಾಡಿರಿ. ಇದಕ್ಕಾಗಿ ಯಾವ ಯಾವ ದೊಡ್ಡ ದೊಡ್ಡ ಅಸೋಸಿಯೇಷನ್‌ಗಳು (ಸಂಘ) ಇವೆಯೋ ಅಥವಾ ಕಂಪೆನಿಗಳಿವೆಯೋ, ಸೊಸೈಟಿಗಳು (ಸಹಕಾರ ಸಂಘಗಳು) ಇವೆಯೋ ಅವುಗಳಲ್ಲಿ ವಿಶೇಷವಾಗಿ ನಿಮಿತ್ತರಾದ ಆತ್ಮರಿಗೆ ಪರಿಚಯವನ್ನು ಕೊಟ್ಟು ಸಮೀಪದಲ್ಲಿ ಕರೆತರಿಸಿದರೆ ಒಬ್ಬೊಬ್ಬರಿಗೂ ಪ್ರತ್ಯೇಕವಾಗಿ ಸೇವೆ ಮಾಡುವುದಕ್ಕೆ ಬದಲಾಗಿ ಒಂದೇ ಸಮಯದಲ್ಲಿ ಅನೇಕ ಆತ್ಮರ ಸೇವೆಯು ಆಗಿಬಿಡುವುದು. ಇದರ ಬಗ್ಗೆ ಮುಂದೆ ಇನ್ನೂ ಅಧಿಕ ಗಮನವನ್ನು ಕೊಟ್ಟು ವೃದ್ಧಿ ಮಾಡಿರಿ. ಎರಡನೆಯದಾಗಿ ಈಗ ನೀವು ಎಂತಹ ಭಾಷಣಕಾರರನ್ನು ತಯಾರು ಮಾಡಬೇಕೆಂದರೆ, (ದೊಡ್ಡ ಮೈಕ್‌ಗಳು ಬೇರೆ ಇದ್ದಾರೆ. ಅವರನ್ನಂತೂ ತಯಾರು ಮಾಡಲೇಬೇಕು ಆದರೆ ಇಂತಹ ಸಂಪರ್ಕದಲ್ಲಿ ಬರುವವರರಿಗೆ ಹೇಗೆ ಜ್ಞಾನವನ್ನು ಕೊಟ್ಟು ಸಮೀಪದಲ್ಲಿ ಕರೆತರಬೇಕೆಂದರೆ, ನಿಮ್ಮ ಜ್ಞಾನದ ವಿಚಾರಗಳನ್ನು ನೀವು ಹೇಳಬೇಡಿರಿ. ಆದರೆ ಅವರಿಗೆ ಈ ವಿಚಾರವು ಈ ಕಾರಣದಿಂದ ಯಥಾರ್ಥವಾಗಿದೆಯೆಂದು ಸಿದ್ದ ಮಾಡಿ ತಿಳಿಸಿಕೊಡಬೇಕು. **ಈಗ ಶಾಂತಿ ಹಾಗೂ ಪ್ರೇಮವು ಪ್ರಾಪ್ತಿಯಾಗುತ್ತದೆ ಎನ್ನುವ ಹಂತಕ್ಕೆ ತಲುಪಿದ್ದಾರೆ. ಹಾಗೂ ಇಲ್ಲಿ ಪ್ರೇಮವು ಸಿಕ್ಕಿತು, ಅನುಭವವಾಯಿತು ಎಂದಿಷ್ಟೇ ಭಾಷಣದಲ್ಲಿ ಹೇಳುತ್ತಾರೆ ಅಥವಾ ಬ್ರಹ್ಮಾಬಾಬಾರ ಕಮಾಲ್ ಆಗಿದೆಯೆಂದು ಹೇಳುವ ಮಟ್ಟಕ್ಕೆ ಬಂದಿದ್ದಾರೆ. ಆದರೆ ಬ್ರಹ್ಮಾಬಾಬಾರಲ್ಲಿ ಪರಮ ಆತ್ಮನ ಕಮಾಲ್ ಆಗಿದೆ ಎನ್ನುವುದು ಈಗ ಅವರಿಗೆ ಮನವರಿಕೆಯಾಗಬೇಕು**. ವಿದೇಶದವರಿಗೆ ಬಾಪ್‌ದಾದಾರು ಅವರು ಧೈರ್ಯ ಇಟ್ಟುಕೊಂಡು ಪ್ರಮುಖ ವ್ಯಕ್ತಿಗಳನ್ನು ಸಮೀಪದಲ್ಲಿ ಕರೆತಂದಿದ್ದಕ್ಕೆ ಅಭಿನಂದನೆಗಳನ್ನು ನೀಡುತ್ತಿದ್ದಾರೆ ಹಾಗೂ ಅವರು ದಿನ ಪ್ರತಿದಿನವೂ ಪ್ರತಿವರ್ಷವೂ ಪ್ರಗತಿ ಹೊಂದುತ್ತಿದ್ದಾರೆ. ಆದರೆ ಯಾರಾದರೂ ಅಧಿಕಾರ ಸ್ಥಾನದಲ್ಲಿರುವ ಗಣ್ಯ ವ್ಯಕ್ತಿಗಳನ್ನು ಅಧಿಕ ಸಂಖ್ಯೆಯಲ್ಲಿ ಅಲ್ಲದಿದ್ದರೂ 10-15 ಮಂದಿಯನ್ನಾದರೂ ಕೇಳುವವರ ಮೇಲೆ ಪ್ರಭಾವ ಬೀರುವವರನ್ನು ಅವರು ಭಾರತದಲ್ಲಿಯಾದರೂ ಇರಲಿ ಅಥವಾ ವಿದೇಶದಲ್ಲಿಯಾದರೂ ಇರಲಿ ಅಂತಹವರನ್ನು ಜ್ಞಾನದ ಸಮೀಪದಲ್ಲಿ ಕರೆತನ್ನಿರಿ. ಇದರಿಂದ ಅವರು ಪರಮಾತ್ಮ ಜ್ಞಾನವನ್ನು ಸ್ವಯಂ ತಿಳಿದುಕೊಂಡು ಅನ್ಯರಿಗೆ ಸ್ಪಷ್ಟಮಾಡಲಿ. ಇದರಲ್ಲಿ ಪರಿಶ್ರಮವಿದೆ. ಆದರೆ ತಂದೆಯ ಪ್ರತ್ಯಕ್ಷತೆಯನ್ನು

ಪರಮಾತ್ಮ ಜ್ಞಾನದ ಪ್ರತ್ಯಕ್ಷತೆಯನ್ನು ಒಂದುವೇಳೆ ಡೈಮಂಡ್ ಜೂಬ್ಲಿಯ ನಂತರವೂ ನೀವು ಮಾಡದಿದ್ದರೆ ಯಾವಾಗ ಮಾಡುವಿರಿ. ಆದ್ದರಿಂದ ಈಗ 62 ದೇಶಗಳಲ್ಲಿ ಸೇವಾಕೇಂದ್ರಗಳು ಸಣ್ಣದಾಗಿರಲಿ, ದೊಡ್ಡದಾಗಿರಲಿ ಇರುವುದರಿಂದ ಪ್ರತಿಯೊಂದು ದೇಶವೂ ದೊಡ್ಡ ಮೈಕ್‌ಗೆ ಮುಂಚೆ ಇಂತಹ ಭಾಷಣಕಾರರನ್ನು ತಯಾರು ಮಾಡಿರಿ. ಭಾರತದಲ್ಲಿಯೂ ಪ್ರತಿಯೊಂದು ಪ್ರಾಂತದಲ್ಲಿ ಇಂತಹ ಭಾಷಣಕಾರರ ತಂಡ ಅಥವಾ ಒಬ್ಬರಿಬ್ಬರನ್ನು ತಯಾರು ಮಾಡಿರಿ. ಇತರರು ಪ್ರಮಾಣೀಕರಿಸಿದಾಗ ತಂದೆಯ ಪ್ರತ್ಯಕ್ಷತೆಯು ಆಗುವುದು.  ಹೇಗೆ ಇಲ್ಲಿಯವರೆಗೆ ಏನು ಸೇವೆ ಮಾಡಿದ್ದೀರೋ ಅದರ ಪರಿಣಾಮವಾಗಿ ಅನ್ಯರ ಅನುಭವದಿಂದ ನಿಮ್ಮ ಪರಿಚಯವನ್ನು ಕೇಳಿ ವೃದ್ಧಿಯಾಗುತ್ತಾ ಬಂದಿದೆ. ಯಾವಾಗಿನಿಂದ ಅಲ್ಲಿ ಸ್ವರ್ಗವಿದೆ, ಶಾಂತಿ, ಪ್ರೀತಿಯಿದೆಯೆಂದು ಅನ್ಯರು ಹೇಳಲು ಪ್ರಾರಂಭ ಮಾಡಿದ್ದಾರೆಯೋ ಆಗ ಒಬ್ಬರಿಬ್ಬರ ಅನುಭವವನ್ನು ಕೇಳಿ ವೃದ್ಧಿಯು ಬೇಗ ಆಗಿದೆ.  ಅಲ್ಲಿಯವರೆಗಂತೂ ಸೇವೆ ಮಾಡಿದ್ದೀರಿ. ಅದಕ್ಕೆ ಅಭಿನಂದನೆಗಳು. ಮುಂದೆ ಏನು ಮಾಡಬೇಕಾಗಿದೆ? ಅಂತಹವರನ್ನು ಸಮೀಪದಲ್ಲಿ ಕರೆತನ್ನಿರಿ. ಪ್ರತ್ಯೇಕವಾಗಿ ಜ್ಞಾನದಲ್ಲಿ ಆಸಕ್ತಿಯನ್ನುಂಟು ಮಾಡಲು ಶ್ರಮವಹಿಸಿರಿ. ಸಂಘಟನೆಯಲ್ಲಿ ಇದನ್ನು ಮಾಡಲು ಸಾಧ್ಯವಾಗುವುದಿಲ್ಲ. ಇದರ ಸಲುವಾಗಿ ಶ್ರಮಪಟ್ಟು ಸಂಪರ್ಕದಲ್ಲಿರುವವರನ್ನು ಸೇವೆಯಲ್ಲಿ ತೊಡಗಿಸಿರಿ. ಈಗ ಭೂಮಿಯನ್ನು ಹಸನು ಮಾಡಿದ್ದೀರಿ. ಇನ್ನು ಮುಂದೆ ಭೂಮಿಯಲ್ಲಿ ಜ್ಞಾನ ಅಥವಾ ಪರಮಾತ್ಮ ಪರಿಚಯದ ಬೀಜವನ್ನು ಬಿತ್ತುವ ಲಕ್ಷ್ಯವನ್ನು ಇಟ್ಟುಕೊಳ್ಳಿರಿ. ಇದಕ್ಕೆ ಸಮಯ ಹಿಡಿಯಬಹುದು, ಆದರೆ ಈ ಲಕ್ಷ್ಯವನ್ನು ಇಟ್ಟುಕೊಂಡಿದ್ದರಿಂದ ಆಗಿಬಿಟ್ಟಿತಲ್ಲವೇ? ಸಫಲತೆಯು ದೊರೆಯಿತಲ್ಲವೇ? ಇಲ್ಲದಿದ್ದರೆ ಮುಂದೆ ಏನು ಯೋಚಿಸುತ್ತಿದ್ದಿರೆಂದರೆ ವಿದೇಶದಿಂದ ಇಲ್ಲಿಗೆ ಹೇಗೆ ಬರುವರು ಎಂದು. ತುಂಬಾ ಕಷ್ಟವೆಂದು ತಿಳಿದುಕೊಂಡಿದ್ದಿರಿ. ಆದರೆ ಈಗ 200-250 ಮಂದಿ ಬಂದುಬಿಡುತ್ತಾರಲ್ಲವೇ, ಆದ್ದರಿಂದ ಈ ರೀತಿ ಭೂಮಿಯನ್ನು ಹದ ಮಾಡಿದ್ದೀರಿ. ನೇಗಿಲಿನಿಂದ ಉಳುಮೆ ಮಾಡಿದ್ದೀರಿ. ಚೆನ್ನಾಗಿ ಶ್ರಮವಹಿಸಿದ್ದೀರಿ. ಈಗ ಇಂತಹ ತಂಡವನ್ನು ತಯಾರು ಮಾಡಿರಿ. ಪರಮಾತ್ಮನು ಸರ್ವವ್ಯಾಪಿಯಲ್ಲ ಎನ್ನುವುದನ್ನು ಅಥವಾ ತುಂಬಾ ಕಠಿಣವಾದ ಪಾಯಿಂಟುಗಳನ್ನು ಅವರು ವರ್ಣನೆ ಮಾಡದಿರಬಹುದು. ಆದರೆ ಕನಿಷ್ಟಪಕ್ಷ ಇದು ಪರಮಾತ್ಮನ  ಶಕ್ತಿಯಾಗಿದೆಯೆಂದಾದರೂ ತಿಳಿದುಕೊಳ್ಳಲಿ. ಬ್ರಹ್ಮಾರವರ ಶಕ್ತಿಯು ಬೇರೆ ಇಲ್ಲ. ಬ್ರಹ್ಮಾರಲ್ಲಿಯೂ ಪರಮಾತ್ಮ ಶಕ್ತಿಯು ಕಾರ್ಯವನ್ನು ಮಾಡಿದೆ ಎಂಬುದನ್ನು ಅರಿತುಕೊಳ್ಳಲಿ. ಹೀಗೆ ತಂದೆಯ ಪರಿಚಯವಾದರೂ ಅವರಿಗೆ ದೊರೆಯಬೇಕಲ್ಲವೇ. ಇದು ಪರಮಾತ್ಮನ ಕಾರ್ಯವಾಗಿದೆ. ಯಾವುದೋ ಶಕ್ತಿಯಿದೆ ಎನ್ನುವುದನ್ನೇನೋ ಹೇಳುತ್ತಾರೆ. ಸಮಾಪ್ತಿಯು ಯಾವಾಗ ಆಗುವುದೆಂದರೆ, ಯಾವಾಗ ಕೊನೆಗೆ ಪರಮಾತ್ಮನ ಪರಿಚಯವು ದೊರೆಯುವುದೋ ಆಗ.  ಇಲ್ಲಿಯವರೆಗೆ ಏನು ಮಾಡಿದ್ದೀರೋ ಅದನ್ನು ತುಂಬಾ ಚೆನ್ನಾಗಿ ಮಾಡಿದ್ದೀರಿ. ಆದರೆ ಈಗ ಇನ್ನೂ ಅತ್ಯುತ್ತಮವಾಗಿ ಮಾಡಿರಿ. ತುಂಬಾ ಪರಿಶ್ರಮಿಸಬೇಕಾಗುತ್ತದೆ ಎನ್ನುವುದು ತಂದೆಗೆ ಗೊತ್ತಿದೆ. ಆದರೆ ಕಾರ್ಯವನ್ನು ಮಾಡುವುದಂತೂ ಮಾಡಬೇಕಾಗುತ್ತದೆಯಲ್ಲವೇ. ಆದ್ದರಿಂದ ಎಂತಹ ಯಾವುದಾದರೂ ಪ್ರೋಗ್ರಾಮ್ ತಯಾರು ಮಾಡಬೇಕೆಂದರೆ, ಯಾರನ್ನು ಯೋಗ್ಯರೆಂದು ತಿಳಿದುಕೊಂಡಿದ್ದೀರೋ ಅವರ ಸಣ್ಣ ಸಣ್ಣ ತಂಡವನ್ನು ಸಮೀಪದಲ್ಲಿ ಕರೆತನ್ನಿರಿ. ಇದನ್ನು ಒಬ್ಬೊಬ್ಬರೇ ಮಾಡಿರಿ ಅಥವಾ ಸಣ್ಣ ತಂಡದಲ್ಲಿ ಮಾಡಿರಿ. ಎಂತಹ ವ್ಯಕ್ತಿಯಾಗಿದ್ದಾರೋ ಅಂತಹ ಸೇವೆ ಮಾಡಿರಿ. ಏನು ಮಾಡಬೇಕೆನ್ನುವುದು ತಿಳಿಯಿತೇ?

**ಒಳ್ಳೆಯದು-ನಾಲ್ಕೂ ಕಡೆಯ ಶಿವಜಯಂತಿಯ ಧನ್ಯವಾದಗಳನ್ನು ಅರ್ಪಿಸುವ ಮಕ್ಕಳಿಗೆ, ಸದಾ ತಂದೆಯ ಜೊತೆಯಲ್ಲಿ ಇರುವ ಕಂಬೈಂಡ್ ರೂಪಧಾರೀ ಮಕ್ಕಳಿಗೆ, ಸದಾ ಉತ್ಸಾಹ ಉಲ್ಲಾಸದ ಮೂಲಕ ಸ್ವಯಂ ಹಾಗೂ ಇತರರನ್ನು ಸೇವೆಯಲ್ಲಿ ಮುನ್ನಡೆಸುವ ಸತ್ಯ ಸೇವಾಧಾರೀ ಮಕ್ಕಳಿಗೆ ಬಾಪ್ ದಾದಾರವರ ಪದಮ-ಪದಮ-ಪದಮದಷ್ಟು ಶುಭಾಶಯಗಳು ಸಲ್ಲುತ್ತವೆ. ಶುಭಾಶಯಗಳನ್ನು. ಪ್ರೀತಿಯ ಜೊತೆಯಲ್ಲಿ ತಂದೆಯೂ ಸಹ ಮಕ್ಕಳ ನೆನಪು-ಪ್ರೀತಿಯನ್ನು ಸ್ವೀಕಾರ ಮಾಡುತ್ತಾ ಇದ್ದೇವೆ. ಎಲ್ಲಾ ಕಡೆಯೂ ಶುಭಾಶಯ- ಶುಭಾಶಯದ ಮನಸ್ಸಿನ ಗೀತೆಯು ನುಡಿಸುತ್ತಿರುವುದನ್ನು ನೋಡುತ್ತಾ ಇದ್ದೇವೆ. ಹೀಗೆ ಇಂತಹ ಶುಭಾಶಯಗಳನ್ನು ತೆಗೆದುಕೊಳ್ಳುವ ಹಾಗೂ ಶುಭಾಶಯಗಳನ್ನು ನೀಡುವವರಿಗೆ ಎರಡರ ಸಂಗಮದ ವಿಶೇಷ ನೆನಪು-ಪ್ರೀತಿ ಹಾಗೂ ನಮಸ್ತೆ.**

ಒಳ್ಳೆಯದು ಒಂದು ಶುಭ ಸಮಾಚಾರವನ್ನು ಈ ದಿನ ಹೆಣ್ಣುಮಗಳು ತಿಳಿಸಿದಳು - ಅದೇನೆಂದರೆ ಈ ತಂಡದಲ್ಲಿ ಪೂರ್ತಿ ಒಂದು ವರ್ಷದಿಂದ ಕ್ರೋಧಮುಕ್ತರಾಗಿರುವವರು ಇದ್ದಾರೆ ಎನ್ನುವುದಾಗಿದೆ. ಆದ್ದರಿಂದ ಯಾವಾಗ ಸೆರಿಮನಿ (ಸಮಾರಂಭವು) ಆಗುವುದೋ ಆಗಲೇ ಇಂತಹ ಕ್ರೋಧಮುಕ್ತರಾಗಿರುವ ಮಕ್ಕಳ ಮುಖವನ್ನು ಎಲ್ಲರೂ ನೋಡಿರಿ ಹಾಗೂ ತಂದೆಯು ನೋಡುವೆನು. ಅವರು ಸ್ಟೇಜಿನ (ವೇದಿಕೆಯ) ಮೇಲೆ ಬರುವರು. ಯಾರು ಕೈ ಎತ್ತಿಲ್ಲವೋ ಆದರೆ ಕ್ರೋಧಮುಕ್ತರಾಗಿದ್ದಾರೋ ಅವರೂ ಸಹ ಬರಬಹುದು. ಆದರೆ ಒಂದು ವರ್ಷದಿಂದ ಕ್ರೋಧಮುಕ್ತರಾಗಿರಬೇಕು. ಏನು ವಿಚಾರಮಾಡುತ್ತಿದ್ದೀರಿ? ನಾವೂ ಸಹ ಒಂದುವೇಳೆ ಕ್ರೋಧಮುಕ್ತರಾಗಿದ್ದರೆ ಒಳ್ಳೆಯದಾಗುತ್ತಿತ್ತು ಎಂದು.

**ದಾದಿಯರೊಂದಿಗೆ** : ನಿಮ್ಮ ತ್ಯಾಗ ಹಾಗೂ ತಪಸ್ಸಿನ ಫಲವು ಪ್ರತ್ಯಕ್ಷ ಫಲವನ್ನು ತೋರಿಸುತ್ತಾ ಇದೆ. ಈ 14 ವರ್ಷದ ತಪಸ್ಸೆಲ್ಲವನ್ನೂ ನೀವು ಪ್ರತ್ಯಕ್ಷದಲ್ಲಿ ಫಲಿತಾಂಶದ ರೂಪದಲ್ಲಿ ನೋಡುತ್ತಾ ಇದ್ದೀರಿ. ಎಲ್ಲರೂ ಈ ದೇಶದಲ್ಲಾಗಲೀ ಅಥವಾ ವಿದೇಶದಲ್ಲಿಯಾಗಲೀ ಈ ವರ್ಷದ ಆದಿಯಿಂದ ಅಕ್ಕರೆ ಉತ್ಸಾಹದಲ್ಲಿ ತುಂಬಾ ಬಂದಿರಿ. ಏಕೆ? ವಿಶೇಷತೆಯು ಏನಾಗಿದೆ? ಇಷ್ಟೊಂದು ಅಕ್ಕರೆ ಉತ್ಸಾಹದಲ್ಲಿ ಏಕೆ ಬಂದಿರಿ. (ಡೈಮಂಡ್ ಜೂಬ್ಲಿ ಆಗಿದೆ.) ಡೈಮಂಡ್ ಜೂಬ್ಲಿಯ ಖುಷಿಯೂ ಇದೆ. ಆದರೆ ಜೊತೆ ಜೊತೆಗೆ ಸೇವೆಯ ಸಫಲತೆಯು ಈಗ ಪ್ರತ್ಯಕ್ಷ ಫಲದ ರೂಪದಲ್ಲಿ ಗೋಚರವಾಗುತ್ತಾ ಇದೆ. ಫಲವು ಎರಡು ಪ್ರಕಾರದ್ದು ಇದೆ. ಒಂದು ಸ್ವಾರ್ಥದ ಫಲವಾಗಿರುತ್ತದೆ. ಅದು ಅಲ್ಪಕಾಲದ್ದಾಗಿರುತ್ತದೆ ಹಾಗೂ ಇನ್ನೊಂದು ನಿಸ್ವಾರ್ಥ ಸೇವೆಯ ಫಲವಾಗಿದೆ. ಈಗ ಏನು ದೊರೆಯುತ್ತಾ ಇದೆಯೋ ಅದು ಇಷ್ಟು ಸಮಯ ನೀವು ಮಾಡಿರುವ ನಿಸ್ವಾರ್ಥ ಸೇವೆಯ ಫಲವು ಸಹಜವಾಗಿ ಪ್ರಾಪ್ತಿಯಾಗುತ್ತಾ ಇದೆ. ಹಾಗೂ ಈ ಡೈಮಂಡ್ ಜೂಬ್ಲಿಯ ನಶೆಯಲ್ಲಿ, ಖುಷಿಯಲ್ಲಿ ಸೇವೆಯು ಇನ್ನೂ ವೃದ್ಧಿಯನ್ನು ಹೊಂದಲು ಸಾಧ್ಯವಿದೆ. ನೀವು ಅಕ್ಕರೆ ಉತ್ಸಾಹದಿಂದ ವೃದ್ಧಿ ಮಾಡುತ್ತಾ ಹೋದರೆ ಸೇವೆಯು ವೃದ್ಧಿಯಾಗುವುದು. ನೀವು ನಿಮಿತ್ತ ಆಗಿರುವ ಆತ್ಮರು ಲಕ್ಷ್ಯವನ್ನು ಇಟ್ಟುಕೊಂಡರೆ ನಿಮ್ಮ ಲಕ್ಷ್ಯದ ಕಿರಣಗಳು ಎಲ್ಲರಿಗೂ ದೊರೆಯುವುವು. ಆಗಿಯೇ ಆಗಲಿದೆ. ನೀವಂತೂ ಮಾಡಲೇಬೇಕಾಗಿದೆ. ಆದರೆ ಅನ್ಯರಿಗೂ ಸಹ ಅಕ್ಕರೆ ಹಾಗೂ ಧೈರ್ಯವನ್ನು ತಂದುಕೊಡುವುದರಲ್ಲಿ ಲಕ್ಷ್ಯವನ್ನು ಇನ್ನೂ ದೃಢವಾಗಿ ಇಟ್ಟುಕೊಳ್ಳಿರಿ. ಬ್ರಹ್ಮಾಬಾಬಾ ಹಾಗೂ ಶಿವ ತಂದೆಯ ಪರಿಚಯವು ಮಕ್ಕಳಿಗೆ ದೊರೆಯಬೇಕಲ್ಲವೇ? ತಿಳಿಯಿತೇ? (ಎದುರಿನಲ್ಲಿ ಕುಳಿತುಕೊಂಡಿರುವ ಶಿಕ್ಷಕಿಯರೊಂದಿಗೆ) ನೀವು ಹೇಳುತ್ತಾ ಇದ್ದೀರಲ್ಲವೇ? ಭುಜಗಳಾದ ನೀವಿಲ್ಲದಿದ್ದರೆ ಏನೂ ಆಗುವುದಿಲ್ಲ. ಇವರು ಪ್ಲಾನ್ (ಯೋಜನೆ) ತಯಾರು

ಮಾಡುವವರು ಹಾಗೂ ಸಂಕಲ್ಪವನ್ನು ನೀಡುವವರಾಗಿದ್ದಾರೆ. ಆದರೆ ಸಂಕಲ್ಪವನ್ನು ಸಾಕಾರ ಮಾಡುವವರು, ಕಾರ್ಯಗತ ಮಾಡುವವರು ಯಾರಾಗಿದ್ದಾರೆ? ನಾವಾಗಿದ್ದೇವೆ ಎಂದು ಹೇಳಿರಿ. ಏಕೆ ಭುಜವೆಂದು ತಿಳಿದುಕೊಂಡು ಮಾಡಿದರೆ ದೇಹಾಭಿಮಾನದ ನಾನು ಎನ್ನುವ ಅಹಂ ಬರುವುದೇ ಇಲ್ಲ. ವಿದೇಶದ ಆದಿ ರತ್ನಗಳೂ ಕುಳಿತುಕೊಂಡಿದ್ದಾರೆ. ಅಲೆಯು ಈಗ ಚೆನ್ನಾಗಿದೆ. ಅಲೆಯನ್ನು ಅನ್ಯರಿಗೂ ನೀಡುವ ಅವಶ್ಯಕತೆಯು ಈಗ ಇಲ್ಲ. ಅಲೆಯು ಬಂದು ಬಿಟ್ಟಿದೆ. ಈಗ ಕೇವಲ ಅವರಿಗೆ ಇನ್ನೂ ಅಕ್ಕರೆ ಉತ್ಸಾಹವನ್ನು ತಂದುಕೊಡುತ್ತಾ ಹೋಗಿರಿ. ಉತ್ತಮರಾಗಿದ್ದೀರಿ ಸಮೀಪದಲ್ಲಿದ್ದೀರೋ ನಿಮಿತ್ತರಾದ ಆತ್ಮರು ಹಾಗೂ ಬಾಪ್‌ದಾದಾರ ಸಮೀಪ ಅಥವಾ ವಿದೇಶದಲ್ಲಿದ್ದೀರೋ? ಸಮೀಪದಲ್ಲಿದ್ದೀರಲ್ಲವೇ? ಬಾಪ್‌ದಾದಾರೂ ಸಹ ಭೇಷ್ ನನ್ನ ರೈಟ್ ಹ್ಯಾಂಡ್ (ಬಲಗೈ) ಮಕ್ಕಳೇ ಎಂದು ಖುಷಿಯಾಗುತ್ತೇವೆ. ರೈಟ್ ಹ್ಯಾಂಡ್ ಆಗಿದ್ದೀರಲ್ಲವೇ? ರೈಟ್ ಹ್ಯಾಂಡ್‌ನಿಂದಲೇ ಕಾರ್ಯವು ಆಗುತ್ತದೆ. ಆದ್ದರಿಂದ ಪ್ರತಿಯೊಂದು ಸ್ಥಾನದಲ್ಲಿ ತಂದೆಯ ರೈಟ್ ಹ್ಯಾಂಡ್ ಇದ್ದಾರೆ. ಆದರೆ ಯಾರು ಆದಿ ರತ್ನಗಳು ನಿಮಿತ್ತ ಆಗಿದ್ದೀರೋ ಅವರು ಇನ್ನೂ ಮುನ್ನಡೆಯುತ್ತಾ ಅನ್ಯರನ್ನೂ ಮುನ್ನಡೆಸಿರಿ. ಒಂದೇ ಕಾರ್ಯವಿದೆ ಅಷ್ಟೇ. ಎಲ್ಲಿಯಾದರೂ ಸೇವೆಯಲ್ಲಿ ಅಲ್ಪ ಸ್ವಲ್ಪ ದಣಿವನ್ನು ಅನುಭವ ಮಾಡುತ್ತಿದ್ದರೆ ಅಥವಾ ಶ್ರಮದ ಅನುಭವ ಮಾಡುತ್ತಿದ್ದರೆ. ಅವರಿಗೆ ಯಾವುದಾದರೊಂದು ಸಹಯೋಗವನ್ನು ನೀಡಿ ಅಕ್ಕರೆ ಉತ್ಸಾಹವನ್ನು ದ್ವಿಗುಣಗೊಳಿಸಿರಿ. ಇದು ನಿಮ್ಮ ಕಾರ್ಯವಾಗಿದೆ. ತಿಳಿಯಿತೇ? ಯಾರು ಶಿಕ್ಷಕಿಯರಿದ್ದಾರೋ ಅದರಲ್ಲಿಯೂ ನೀವು ವಿಶೇಷವಾಗಿ ನಿಮಿತ್ತರಾಗಿದ್ದೀರಿ. ನಿಮ್ಮನ್ನು ನಿಮಿತ್ತರೆಂದು ತಿಳಿದುಕೊಂಡಿದ್ದೀರಾ? ಹೇಳಿರಿ, ಸುಸ್ತಾಗಿ ಬಿಟ್ಟಿಲ್ಲ ತಾನೇ? ಚೆನ್ನಾಗಿದೆ. ಎಲ್ಲಾ ಶಿಕ್ಷಕಿಯರಲ್ಲಿಯೂ ಈಗ ಮೆಜಾರಿಟಿಯಲ್ಲಿ ಧೈರ್ಯವು ಬಂದುಬಿಟ್ಟಿದೆ. ಬಂದಿದೆಯಲ್ಲವೇ? ಈಗ ನಿರ್ವಿಘ್ನರಾಗುವ ವಿಧಿಯನ್ನೂ ತಿಳಿದುಕೊಂಡು ಬಿಟ್ಟಿದ್ದೀರಿ. ಮುಂಚೆ ತುಂಬಾ ಗಾಬರಿಯಾಗುತ್ತಾ ಇದ್ದಿರಲ್ಲವೇ. ಈಗ ಗಾಬರಿಯಾಗುವುದು ಕಡಿಮೆಯಾಗಿದೆ. ಧೈರ್ಯವು ಬಂದಿದೆ. ಏಕೆಂದರೆ ಒಂದುಕಡೆ ತಂದೆಯ ಪ್ರೀತಿ ಹಾಗೂ ಇನ್ನೊಂದು ಕಡೆ ಸೇವೆಯ ಶಕ್ತಿ ಎರಡೂ ಈಗ ಧೈರ್ಯವನ್ನು ಅಧಿಕಗೊಳಿಸಿವೆ. ಶಿಕ್ಷಕಿಯರು ಕೈ ಎತ್ತಿರಿ. ಬಾಪ್‌ದಾದಾರವರು ಎಲ್ಲರಿಗೂ ಏನು ಹೇಳುತ್ತೇವೆಂದರೆ ಸದಾ ಖುಷಿಯಾಗಿ ಇರಿ. ಸೇವೆಯಲ್ಲಿ ಮುನ್ನಡೆಯುತ್ತಾ ಇರಿ.

**ಮಕ್ಕಳೊಂದಿಗೆ ಮಿಲನ ಮಾಡಿದ ನಂತರ ಬಾಪ್‌ದಾದರು ತಮ್ಮ ಹಸ್ತಗಳಿಂದ ಧ್ವಜವನ್ನು ಹಾರಿಸಿದರು.**

ಯಾವಾಗ ಈ ಬಾವುಟವನ್ನು ಹಾರಿಸಿದೆವೋ ಆಗ ಎಷ್ಟೊಂದು ಖುಷಿಯಾಗುತ್ತಾ ಇದೆ. ಯಾವಾಗ ವಿಶ್ವದಲ್ಲಿ ಎಲ್ಲರ ಮುಂದೆಯೂ ಬಾವುಟವು ಹಾರುವುದೋ ಆಗ ಎಷ್ಟು ಖುಷಿಯಾಗಬಹುದು. ಎಷ್ಟೊಂದು ಕರತಾಡನವಾಗುತ್ತದೆ (ಚಪ್ಪಾಳೆ). ಬಾವುಟವನ್ನು ಸದಾ ಎತ್ತರದಲ್ಲಿ ಹಾರಿಸುತ್ತಾರೆ. ಏಕೆ? ಎತ್ತರದಲ್ಲಿ ಕಟ್ಟುವ ಅರ್ಥವೇನೆಂದರೆ ಸರ್ವರ ದೃಷ್ಟಿಯೂ ಅದರ ಕಡೆ ಹೋಗಲಿ ಎಂದು. ಹಾಗೆಯೇ ಪ್ರತ್ಯಕ್ಷತೆಯ ಬಾವುಟವು ಹಾರಿದಾಗ ಸರ್ವರ ದೃಷ್ಟಿಯೂ ಆ ಒಬ್ಬ ತಂದೆಯ ಕಡೆ ಇರುವುದು. ನಿಮ್ಮ ಹೃದಯದಲ್ಲಿಯಂತೂ ತಂದೆಯ ನೆನಪಿನ ಬಾವುಟ ಹಾರುತ್ತಾ ಇದ್ದೇ ಇದೆ. ಆದರೆ ಈಗ ಅನ್ಯರ ಹೃದಯಗಳಲ್ಲಿ ಈ ಪ್ರತ್ಯಕ್ಷತೆಯ ಬಾವುಟವನ್ನು ಹಾರಿಸಿರಿ. ಈಗಂತೂ ಬಟ್ಟೆಯ ಬಾವುಟವನ್ನು ಹಾರಿಸಲಾಯಿತು. ಆದರೆ ಪ್ರತ್ಯಕ್ಷತೆಯ ಬಾವುಟವನ್ನು ಎಲ್ಲರೂ ಸೇರಿ ಹಾರಿಸಿರಿ. ಹಾರಿಸಲೇಬೇಕು.

ರಿವೈಸ್ ಕೋರ್ಸ್ 16-02-1996.

***ಡೈಮಂಡ್ ಜುಬ್ಲಿ(ವಜ್ರ ಮಹೋತ್ಸವದ) ವರ್ಷದಲ್ಲಿ ವಿಶೇಷವಾಗಿ ಗಮನವಿಟ್ಟು ಸಮಯ ಹಾಗೂ ಸಂಕಲ್ಪದ ಖಜಾನೆಯನ್ನು ಜಮಾ ಮಾಡಿಕೊಳ್ಳಿರಿ.***

ಭಕ್ತಿಯಲ್ಲಿ ಕೂಡ ನಿಮಗೆ ಬೇಡಲು ಬರುತ್ತಿರಲಿಲ್ಲ, ತಂದೆಯೂ ತಾನಾಗಿಯೇ ವಾರಸತ್ವದ ರೂಪದಲ್ಲಿ ಸರ್ವಸ್ವವನ್ನೂ ಕೊಟ್ಟುಬಿಟ್ಟರು. ತನಗಾಗಿ ಏನನ್ನಾದರೂ ಉಳಿಸಿಕೊಂಡರೇ? ಬಾಪ್‌ದಾದಾರವರು ಬಹಳಷ್ಟು ಮಕ್ಕಳು ಶ್ರಮ ಪಡುತ್ತಿರುವುದನ್ನು ನೋಡುತ್ತಿದ್ದಾರೆ. ಶ್ರಮಪಟ್ಟರೂ ಜಮಾದ ಖಾತೆ ಎಷ್ಟಿರಬೇಕೋ  ಅಷ್ಟಿಲ್ಲ ಆದ್ದರಿಂದ ಈಗ ಸ್ಮೃತಿಯ ಮೂಲಕ, ಸೇವೆಯ ಮೂಲಕ, ಶುಭ ಭಾವನೆ, ಶುಭಕಾಮನೆಯ ಮೂಲಕ ಜಮಾಖಾತೆಯನ್ನು ಹೆಚ್ಚಿಸಿಕೊಳ್ಳಿರಿ, ಸಂಪಾದನೆ ಮಾಡಿಕೊಳ್ಳಿರಿ. ಇಡೀ ಕಲ್ಪಕ್ಕಾಗಿ ಜಮಾ ಮಾಡಿಕೊಳ್ಳುವ ಬ್ಯಾಂಕ್ ಈ ಸಂಗಮ ಯುಗದಲ್ಲಿಯೇ ತೆರೆದಿರುತ್ತದೆ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಪವಿತ್ರ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ಸಂಗಮ ಯುಗದಲ್ಲಿ ಶ್ರೇಷ್ಠಾತ್ಮನಾದ ನಾನು ಪರಮಾತ್ಮ ಜಯಂತಿ ಮತ್ತು ಪರಮಾತ್ಮ ನನ್ನ ಜಯಂತಿಯನ್ನು ಆಚರಿಸುವ ಪದಮಾ ಪದಮ್ ಭಾಗ್ಯಶಾಲಿ ಆಗಿದ್ದೇನೆ.

2. ನಾನು ತಂದೆಯ ಕೊರಳಲ್ಲಿರುವ ಮಾಲೆಯಲ್ಲಿ ಹೊಳೆಯುವ ವಜ್ರವಾಗಿದ್ದೇನೆ.

3. ನಾನು ಅಮೃತ ವೇಳೆಯ ವರದಾನಿ ಸಮಯದಲ್ಲಿ ಪ್ರತಿದಿನ ವರದಾನವನ್ನು ಪಡೆಯುವ ವರದಾನಿ ಸ್ವರೂಪ.

4. ನಾನು ಶಾಂತಿಯ ಸಾಧನಗಳಿಂದ ಮಾಯೆಯನ್ನು ದೂರದಿಂದಲೇ ಗುರುತಿಸಿ  ಓಡಿಸಿ ಸಮಯವನ್ನು ಜಮಾ ಮಾಡಿಕೊಂಡಿದ್ದೇನೆ.

5. ನಾನು ಪ್ರತಿ ಸಮಯ, ಪ್ರತಿಯೊಂದು ಕರ್ಮ ಮಾಡುತ್ತಲೂ ತ್ರಿಕಾಲದರ್ಶಿ ಸೀಟ್ನ ಮೇಲೆ ಸೆಟ್ಟಾಗಿ ಏಕೆ, ಏನು ಎಂಬ ಪ್ರಶ್ನೆಗಳನ್ನು ಸಮಾಪ್ತಿ ಮಾಡಿ ಸ್ವಯಂನ ಮೂಲಕ, ಅನ್ಯರ ಮೂಲಕ, ಮಾಯೆಯ ಮೂಲಕ ಅಥವಾ ಪ್ರಕೃತಿಯ ಮೂಲಕವಾಗಲೀ ಪರಿಸ್ಥಿತಿಗಳು ಬರಲೇಬೇಕು, ಆಗಲೇಬೇಕು ಎಂದು ತಿಳಿದುಕೊಂಡು ಆದಿ, ಮಧ್ಯ, ಅಂತ್ಯ, ಮೂರು ಕಾಲಗಳನ್ನು ಪರಿಶೀಲಿಸಿ ತಿಳಿದುಕೊಂಡು ಪರಿಸ್ಥಿತಿಯ ಮುಂದೆ ಸ್ವಸ್ಥಿತಿಯನ್ನು ಶಕ್ತಿಶಾಲಿಯಾಗಿ, ದೊಡ್ಡದಾಗಿ ಮಾಡಿಕೊಂಡಿದ್ದೇನೆ.

6. ನಾನು ಸ್ವಯಂನಲ್ಲಿ ಕೂಡ ಮನಸ್ಸಿನಲ್ಲಿ ಕೂಡ ಒಂದು ಕ್ಷಣ ಕೂಡ ಪಶ್ಚಾತಾಪ ಪಡದೆ ಮೊದಲು ಯೋಚಿಸಿ ನಂತರ ಮಾಡುವ ತ್ರಿಕಾಲದರ್ಶಿ, ಜ್ಞಾನಸ್ವರೂಪ.

7. ನಾನು ಸಮಯವನ್ನು ಮತ್ತು ಶ್ರೇಷ್ಠ, ಶುಭ ಸಂಕಲ್ಪಗಳನ್ನು ಎಷ್ಟು ಜಮಾ ಮಾಡಿಕೊಂಡಿದ್ದೇನೆ ಎನ್ನುವ ಪೂರ್ಣ ಗಮನವನ್ನು ಇಡುತ್ತಿದ್ದೇನೆ.

8. ನಾನು ಒಂದಕ್ಕೆ ಪದಮಾ ಪದಂ ಜಮಾ ಮಾಡಿಕೊಳ್ಳುವ ಬ್ಯಾಂಕ್ ಈ ಸಂಗಮ ಯುಗದಲ್ಲಿಯೇ ಇದೆ ಎಂಬ ಸ್ಮೃತಿಯಿಂದ ಜಮಾದ ಖಾತೆಯನ್ನು ಇಡೀ ಕಲ್ಪಕಾಗಿ ತಯಾರು ಮಾಡಿಕೊಂಡಿದ್ದೇನೆ.

9. ನಾನು ವಜ್ರಮಹೋತ್ಸವದಲ್ಲಿ ತ್ಯಾಗವನ್ನು ಮಾಡಬೇಕಾಗಿ ಬಂದರೂ, ತಪಸ್ಸು ಮಾಡಬೇಕಾಗಿ ಬಂದರೂ, ನಿರ್ಮಾನವಾಗಬೇಕಾಗಿ ಬಂದರೂ, ಏನಾದರೂ ಆಗಲಿ ನಾನು ಸತ್ಯವಾದ ವಜ್ರವಾಗಲೇಬೇಕು ಎಂಬ ನಿಶ್ಚಯದಲ್ಲಿ ಇದ್ದೇನೆ.

10. ನಾನು "ನಾನು"ಎಂಬ ಶಬ್ದ ಬಂದಾಗಲೆಲ್ಲ ತಂದೆಯ ಸ್ಮೃತಿ ಸಹಜವಾಗಿ ಬರುವ ಅಭ್ಯಾಸಿ ಆಗಿದ್ದೇನೆ.

11. ದೇಹೀಅಬಿಮಾನದಲ್ಲಿದ್ದು ಮನಸ್ಸು ಮತ್ತು ಬುದ್ಧಿ ಎರಡರ ಸಮತೋಲನೆಯಿಂದ ಸೇವೆಯನ್ನು ಮಾಡುವ ಸತ್ಯವಾದ ಸೇವಾಧಾರಿ. (ನಾನು ಎಂಬ ಭಾವದಲ್ಲಿದ್ದು, ಇತರರ ಸಫಲತೆಯನ್ನು ನೋಡಿ ಬರುವ ಅಸೂಯೆಯನ್ನು ಸಮಾಪ್ತಿ ಮಾಡಿ)

12. ನಾನು ಆತ್ಮೀಯತೆಯಿಂದ ಸೇವೆಯಲ್ಲಿ ಸಫಲತೆಯನ್ನು, ಸೇವೆಯ ಪ್ರತ್ಯಕ್ಷ ಫಲವನ್ನು, ಸಮಯವನ್ನು, ಶ್ರೇಷ್ಠ ಸಂಕಲ್ಪಗಳನ್ನು, ಶುಭ ಭಾವನೆ ಶುಭಕಾಮನೆ ಸಂಕಲ್ಪಗಳನ್ನು ಜಮಾ ಮಾಡಿಕೊಂಡು ಜಮಾ ಖಾತೆಯನ್ನು ಹೆಚ್ಚಿಸಿಕೊಂಡು ಸ್ವತಹವಾಗಿ ವಜ್ರವಾಗಿದ್ದೇನೆ.

13. ನಾನು ವರ್ತಮಾನದಲ್ಲಿ ಸಮಯ ಮತ್ತು ಸಂಕಲ್ಪಗಳನ್ನು ಉಳಿತಾಯ ಮಾಡಿ ಜಮಾ ಮಾಡಿಕೊಂಡು ಭವಿಷ್ಯದಲ್ಲಿ ರಾಜ್ಯ ಮಾಡುತ್ತೇನೆ ಮತ್ತು ಪೂಜ್ಯನಾಗಿ ಕೂಡ ಆಗುತ್ತೇನೆ.

14. ನಾನು ದಿನವಿಡೀ ಸಮಯವನ್ನು ವ್ಯರ್ಥವಾಗಿ, ಸಾಧಾರಣ ಸಂಕಲ್ಪಗಳು ಎಷ್ಟಿವೆಯೋ ಎಂದು ಪರಿಶೀಲಿಸಿಕೊಂಡು ಪರಿವರ್ತನೆ ಮಾಡಿಕೊಂಡಿರುವ ಸಮರ್ಥ ಸ್ವರೂಪ.

15. ಒಂದುವೇಳೆ ನನ್ನ ಜಮಾ ಖಾತೆ ಏನಾದರೂ ಒಂದು ದಿನದಲ್ಲಿ ಕಡಿಮೆಯಾದರೆ, ವ್ಯಾಕುಲವಾಗದೆ ಉತ್ಸಾಹ ಉಲ್ಲಾಸದಲ್ಲಿ ದೃಢ ಸಂಕಲ್ಪದಿಂದ ಸ್ವಯಂ ನೊಂದಿಗೆ ಸ್ವಯಂ ಸ್ಪರ್ಧೆ ಮಾಡುವ ತೀವ್ರ ಪುರುಷಾರ್ಥಿ.

16. ನಾನು ಸ್ಮೃತಿಯಿಂದ, ಸೇವೆಯಿಂದ, ಶುಭ ಭಾವನೆ ಶುಭ ಕಾಮನೆಯಿಂದ ಜಮಾ ಖಾತೆಯನ್ನು ಹೆಚ್ಚಿಸಿಕೊಂಡಿದ್ದೇನೆ.

17. ನಾನು ಸರ್ವಶಕ್ತಿವಂತನಾದ ತಂದೆಯ ಜೊತೆಯನ್ನು ಉಪಯೋಗಿಸಿಕೊಂಡು ಸಫಲತೆಯು ನನ್ನ ಚರಣಗಳ ಹತ್ತಿರ ಬರುವಂತೆ ಮಾಡಿಕೊಂಡಿದ್ದೇನೆ.

18. ನಾನು ಶಿವಶಕ್ತಿ ಕಂಬೈನ್ಡ್ ಸ್ವರೂಪ ಎಂಬ ಸ್ಮೃತಿಯಿಂದ  ಶಕ್ತಿಶಾಲಿಯಾಗಿ ಇದ್ದೇನೆ.